### ಅಧ್ಯಾಯ 1

# ಸಹಯೋಗದ ಆಯೋಜನೆಯ ಮುಖಾಂತರ ತಲುಪದಿರುವವರನ್ನು ತಲುಪುವುದು -

## ಲೋಕ್ ಜುಂಬಿಶ್ ನಲ್ಲಿ ಶಾಲಾ ನಕ್ಷೆ ತಯಾರಿಸುವಿಕೆ

## ಪೀಠಿಕೆ

### ಸಂದರ್ಭ

"ಎಲ್ಲಾ ಮಕ್ಕಳಿಗೂ 14 ವರ್ಷಗಳವರೆಗೆ ಮುಕ್ತವೂ, ಕಡ್ಡಾಯರೂಪದ್ದೂ ಆದ ತೃಪ್ತಿಕರ ಗುಣಮಟ್ಟದ ಶಿಕ್ಷಣವನ್ನು ನೀಡುವುದನ್ನು…" ಖಾತ್ರಿಪಡಿಸುವುದಾಗಿ ದೇಶದ ಬದ್ಧತೆಯನ್ನು 1950ರಲ್ಲಿ ರಚಿತವಾದ ಭಾರತ ಸಂವಿಧಾನದಿಂದ ಹಿಡಿದು ಇತ್ತೀಚಿನ 1992ರ ರಾಷ್ಟ್ರೀಯ ಶಿಕ್ಷಣ ನೀತಿಯವರೆಗಿನ ಎಲ್ಲಾ ಭಾರತೀಯ ನೀತಿ ಸಂಹಿತೆಗಳೂ ಸಾರಿಹೇಳುತ್ತವೆ. ಆದಾಗ್ಯೂ, ಅಂಕಿ-ಅಂಶಗಳು ಭಾರಿ ಸಂಖ್ಯೆಯ ಮಕ್ಕಳು ಪ್ರಾಥಮಿಕ ಶಿಕ್ಷಣದ ವಲಯದ ಹೊರಗೇ ಉಳಿದಿದ್ದಾರೆ ಎಂಬುದನ್ನು ಬಯಲುಮಾಡುತ್ತದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿ ಸಾಧಿಸುವಲ್ಲಿ ಕೆಲವು ರಾಜ್ಯಗಳು ಉತ್ತಮ ಪ್ರಗತಿ ಕಂಡಿದ್ದರೂ, ಉಳಿದವುಗಳು ಹಿಂದುಳಿದಿವೆ. ರಾಜಸ್ಥಾನವು ದೇಶದ ಅಂತಹ ಹಿಂದುಳಿದ ರಾಜ್ಯಗಳಲ್ಲಿ ಒಂದಾಗಿದ್ದು, ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಮಾಡುವಲ್ಲಿ ಸುಧಾರಣೆ ತರಲು ಹೆಣಗುತ್ತಿದೆ. ಆದರೂ, ಈ ರಾಜ್ಯವನ್ನಷ್ಟೇ ಪರಿಗಣಿಸಿದಾಗ, ರಾಜಸ್ಥಾನವು ಗಮನಾರ್ಹ ಪ್ರಗತಿ ಸಾಧಿಸಿದೆ ಎಂದೆನ್ನಬಹುದು. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, 1951ರಲ್ಲಿ ಇದ್ದ ಪ್ರಾಥಮಿಕ ಶಾಲೆಗಳ ಸಂಖ್ಯೆ 4,336 ರಿಂದ 1991ರ ವೇಳೆಗೆ 30,005ಕ್ಕೆ ಏರಿಕೆಯಾಗಿದೆ.[1] ಇದಕ್ಕೆ ಅನುಗುಣವಾಗಿ, ದಾಖಲಾತಿ ಸಂಖ್ಯೆಗಳೂ ಕೂಡ ಇದೇ ಅವಧಿಯಲ್ಲಿ 369,000ಯಿಂದ 4,652,000ಕ್ಕೆ ಏರಿಕೆಯಾಗಿವೆ. ಇಷ್ಟಾಗಿಯೂ, ಶೇಕಡಾ 38.55ರಷ್ಟು ಸಾಕ್ಷರತೆಯ (ರಾಷ್ಟ್ರೀಯ ಸಾಕ್ಷರತೆಯ ಪ್ರಮಾಣ ಶೇಕಡಾ 52.21 ಆಗಿದೆ) ಪ್ರಮಾಣ ಹೊಂದಿರುವ ರಾಜಸ್ಥಾನವು ದೇಶದ ಶೈಕ್ಷಣಿಕವಾಗಿ ಹಿಂದುಳಿದಿರುವ 10 ರಾಜ್ಯಗಳ ಪೈಕಿ ಸ್ಥಾನಪಡೆದಿದೆ. ಈ ರಾಜ್ಯದ ಮಹಿಳಾ ಸಾಕ್ಷರತೆಯ ಪ್ರಮಾಣವು ಶೇಕಡಾ 20.44 ಇದ್ದು, ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣವು ಇನ್ನೂ ಕಡಮೆ ಇದ್ದು, ಶೇಕಡಾ 11.51 ಆಗಿದೆ; ನಗರ ಪ್ರದೇಶಗಳಲ್ಲಿ ಶೇಕಡಾ 50.24ರಷ್ಟು ಇದೆ.[2] ಈ ಸಂಗತಿಗಳಿಗೆ ಪೂರಕವಾಗಿ 6 – 14 ವಯಸ್ಸಿನ ಶೇಕಡಾ 55ರಷ್ಟು ಮಕ್ಕಳು ಶಾಲೆಯ ಹೊರಗೆ ಉಳಿದಿದ್ದು, ಶೇಕಡಾ 55ರಷ್ಟು ಮಕ್ಕಳು ಒಂದರಿಂದ ಐದನೇ ತರಗತಿಯ ನಡುವೆ ಶಾಲೆ ತೊರೆಯುತ್ತಾರೆ. 14 ವರ್ಷ ಪೂರ್ಣವಾಗುವ ಮುನ್ನ ಶೇಕಡಾ 30ಕ್ಕೂ ಕಡಮೆ ಮಕ್ಕಳು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ.

ಇಂತಹ ಸನ್ನಿವೇಶದಲ್ಲಿ "ಲೋಕ್ ಜುಂಬಿಶ್" ಎಂಬ ಕಾರ್ಯಕ್ರಮವನ್ನು ಉಪಕ್ರಮಿಸಲಾಯಿತು. ಇದರ ಗುರಿ ರಾಜಸ್ಥಾನ ರಾಜ್ಯದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಲು ಪ್ರಯತ್ನಿಸುವುದಾಗಿತ್ತು. ಲೋಕ್ ಜುಂಬಿಶ್ ಅಥವಾ "ಜನಾಂದೋಲನ" ವನ್ನು ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದಲ್ಲಿ ಗ್ರಾಮೀಣ ಸಮುದಾಯದ ಬೆಂಬಲ, ಪಾಲ್ಗೊಳ್ಳುವಿಕೆಯನ್ನು ಬೇರುಮಟ್ಟದಲ್ಲಿ ಸಕ್ರಿಯಕರಣಗೊಳಿಸುವ ಪ್ರಯತ್ನದಲ್ಲಿ 1989ರಲ್ಲಿ ಜಾರಿಮಾಡಲಾಯಿತು. ಅದನ್ನೊಂದು ಪ್ರತ್ಯೇಕ ಪ್ರಾಯೋಜನೆ ಎಂದು ಪರಿಕಲ್ಪಿಸಲಾಗದೆ, ಆಗಲೇ ಅಸ್ತಿತ್ವದಲ್ಲಿದ್ದ

ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಹೆಚ್ಚು ಸ್ಪಂದನಾಶೀಲವಾಗಿಸಲು, ಹೆಚ್ಚು ಒಳಗೊಳ್ಳುವಿಕೆಯ ಸ್ವರೂಪವನ್ನು ಹೊಂದುವಂತಾಗಿಸಲು ಅದಕ್ಕೆ ಮರುಜೀವ ತುಂಬಬಲ್ಲ ಸಾಧನವೆಂದು  ಪರಿಕಲ್ಪಿಸಲಾಯಿತು.

## ಲೋಕ್ ಜುಂಬಿಶ್  ನ ಗುರಿಗಳು *3

ಪ್ರಾಥಮಿಕ ಶಿಕ್ಷಣವೆಂದರೆ ಎಲ್ಲಾ ಮಕ್ಕಳಿಗೂ ಮೂಲಭೂತ ಶಿಕ್ಷಣವನ್ನು ನೀಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳ ಒಟ್ಟುಗೂಡುವಿಕೆಯೆಂಬ ವಿಶಾಲ ದೃಷ್ಟಿಕೋನವು ಲೋಕ್ ಜುಂಬಿಶ್ (Lok Jumbish – LJ (ಎಲ್‌ಜೆ))ಗೆ ಇದೆ; ಅದು ಕೇವಲ ಔಪಚಾರಿಕ ಪ್ರಾಥಮಿಕ ಶಾಲೆಗೆ ಮಾತ್ರ ಸೀಮಿತವಾಗಿಲ್ಲ. 6 ರಿಂದ 14 ರ ವಯಸ್ಸಿನ ಎಲ್ಲಾ ಮಕ್ಕಳಿಗೂ ಶಿಕ್ಷಣ ದೊರೆಯುವುದನ್ನು ಖಾತ್ರಿಪಡಿಸುವ ಕಡೆಗೆ ಅದರ ಗಮನವು ಕೇಂದ್ರೀಕೃತವಾಗಿದೆ. ಈ ಯೋಜನೆಯು ಪ್ರಾಥಮಿಕ ಶಿಕ್ಷಣಕ್ಕಾಗಿ ಜನರ ಆಂದೋಲನವೊಂದನ್ನು ಹುಟ್ಟುಹಾಕುವುದು ಮಾನವ ವಿಕಾಸಕ್ಕೆ ಚುರುಕನ್ನು ನೀಡುತ್ತದೆ, ಹಾಗೂ ತನ್ಮೂಲಕ ಮೂಲಭೂತ ಸಾಮಾಜಿಕ-ಆರ್ಥಿಕ ಪರಿವರ್ತನೆಗೆ ಎಡೆಮಾಡಿಕೊಡುತ್ತದೆ ಎಂದು ಪೂರ್ವಭಾವಿಸುತ್ತದೆ.

ಲೋಕ್ ಜುಂಬಿಶ್ ಸ್ವತಃ ತನಗೆ ಈ ಐದು ಗುರಿಗಳನ್ನು ನಿಗದಿಪಡಿಸಿಕೊಂಡಿದೆ:

a. 14 ವರ್ಷ ವಯಸ್ಸಿನೊಳಗಿನ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ದೊರೆಯುವ ಸಂಯೋಜಿತ ಕಾರ್ಯಕ್ರಮವಾಗಿ ನೋಡಲಾಗುವ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣ; ಪ್ರಾಥಮಿಕ ಹಂತ ಮುಗಯುವವರೆಗೂ ಸಾರ್ವತ್ರಿಕ ಪಾಲ್ಗೊಳ್ಳುವಿಕೆ; ಹಾಗೂ, ಕನಿಷ್ಠ ಪಕ್ಷ, ಕಲಿಕೆಯ ಕನಿಷ್ಠ ಸ್ತರಗಳ ಸಾರ್ವತ್ರಿಕ ಸಾಧನೆ.
b. ತಮ್ಮ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು, ಬಳಸಲು ಹಾಗೂ ಉನ್ನತೀಕರಿಸಲು ಅವಕಾಶಗಳ ಮುನ್ನೇರ್ಪಾಡು, ಹಾಗೂ ಯಾರು ಕಾರ್ಯತಃ ಸಾಕ್ಷರಸ್ಥರೋ ಹಾಗೂ ಯಾರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೋ ಅವರೆಲ್ಲರಿಗೂ ಕೌಶಲಗಳ ಅಭಿವೃದ್ಧಿಗೆ ಸೌಕರ್ಯಗಳ ಮುನ್ನೇರ್ಪಾಡು.
c. ಅಗತ್ಯವಿರುವ ವ್ಯವಸ್ಥೆಯ ನಿರ್ಮಾಣ, ಹಾಗೂ ಮಹಿಳೆಯರ ಸಬಲೀಕರಣಕ್ಕೆ ಎಡೆಮಾಡಿಕೊಡುವ ಹಾಗೂ ಶಿಕ್ಷಣವನ್ನು ಸ್ತ್ರೀ-ಸಮಾನತೆಯ ಸಾಧನವನ್ನಾಗಿಸುವ ಪ್ರಕ್ರಿಯೆಗಳನ್ನು ಉಪಕ್ರಮಿಸುವುದು.
d. 'ಕೀಳು ಜಾತಿ'ಯವರು, ಬುಡಕಟ್ಟು ಜನರಲ್ಲಿ ಅತಿ ಹಿಂದುಳಿದವರ ಹಾಗೂ ಸಮಾಜದ ಇತರ ಅತಿ ಬಡ ವರ್ಗದವರು ಮೂಲಭೂತ ಶಿಕ್ಷಣದಲ್ಲಿ ಸಮಾನವಾಗಿ ಭಾಗವಹಿಸುವುದರೆಡೆಗೆ  ಸಾಗಲು ಅನುವು ಮಾಡಿಕೊಡುವಂತಹ ಅಗತ್ಯವಿರುವ ಹಸ್ತಕ್ಷೇಪಗಳನ್ನು ಮಾಡುವುದು ಹಾಗೂ ಪರಿಸ್ಥಿತಿಗಳನ್ನು ಸೃಷ್ಟಿಸುವುದು.
e. ಪರಿಸರಕ್ಕೆ, ಜನರ ಸಂಸ್ಕೃತಿಗೆ ಹಾಗೂ ಅವರ ಕಸುಬು ಮತ್ತು ಬದುಕಿನ ಸ್ಥಿತಿಗತಿಗಳಿಗೆ ಅದು ಇನ್ನೂ ಉತ್ತಮವಾಗಿ ಸಂಬಂಧಿಸಿಕೊಳ್ಳುವಂತೆ ಶಿಕ್ಷಣದ ವಿಷಯ ಹಾಗೂ ಪ್ರಕ್ರಿಯೆಗಳನ್ನು ಸುಧಾರಿಸುವುದು.

## ಲೋಕ್ ಜುಂಬಿಶ್ (ಎಲ್ ಜೆ) ಗೆ ಸಾಂಸ್ಥಿಕ ಚೌಕಟ್ಟು

ಲೋಕ್ ಜುಂಬಿಶ್‌ನ ಗಮನವು ನೂತನ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದಷ್ಟಕ್ಕೇ ಸೀಮಿತವಾಗಿರದಿದ್ದರೂ, ಅದನ್ನು ಒಂದು ಕಾಲಬದ್ಧ ಪ್ರಾಯೋಜನೆಯ ಚೌಕಟ್ಟಿನೊಳಗೆ ನಡೆಯುವಂತೆ ನೋಡಲಾಗಿದೆ; ಆದರೆ,ಇನ್ನೂ ಮುಖ್ಯವಾಗಿ, ಪ್ರಚಲಿತ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಸುಧಾರಿಸುವುದರ ಮೇಲೆ ಗಮನ ನೀಡುವಂತೆ ಅದನ್ನು ಕಲ್ಪಿಸಲಾಗಿದೆ. ಪ್ರಾಯೋಜನೆಯ ಯೋಜನೆ ಹಾಗೂ ನಿರ್ವಹಣೆಗೆ ಲೋಕ್ ಜುಂಬಿಶ್ ಪರಿಷತ್ತು (Lok Jumbish Parishad – LJP (ಎಲ್ ಜೆಪಿ)) ಅತ್ಯುಚ್ಚ ಪ್ರಾಧಿಕಾರವಾಗಿದ್ದು, ಅದನ್ನು ಒಂದು ಸ್ವತಂತ್ರ, ಸ್ವಾಧಿಕಾರಪೂರ್ಣ ಸಂಸ್ಥೆಯನ್ನಾಗಿ ರಚಿಸಲಾಗಿತ್ತು. ತನ್ನ ಸಿಬ್ಬಂದಿ ಸ್ಥಾನಗಳನ್ನು ರಚಿಸಿಕೊಳ್ಳುವ ಹಾಗೂ ಸೂಕ್ತ ನೇಮಕಾತಿಗಳ ಜೊತೆಗೆ, ತನ್ನ ಆಯ-ವ್ಯಯ ಅಂದಾಜನ್ನು ಅನುಮೋದಿಸುವ ಹಾಗೂ ಅದಕ್ಕೆ ಅನುಗುಣವಾಗಿ ಖರ್ಚುಮಾಡುವ ಸಂಪೂರ್ಣ ಅಧಿಕಾರವನ್ನು ಲೋಕ್ ಜುಂಬಿಶ್ ಪರಿಷತ್ತಿಗೆ ವಹಿಸಿಕೊಡಲಾಗಿದೆ.

**ಬ್ಲಾಕ್ ಕಾರ್ಯ ಸಂಚಾಲಕ ಗುಂಪು**

ರಾಜ್ಯ ಸ್ತರವನ್ನಾಗಲೀ ಅಥವಾ ಜಿಲ್ಲಾ ಸ್ತರವನ್ನಾಗಲೀ (ಸಾಮಾನ್ಯವಾಗಿ 10 ಅಥವಾ ಅದಕ್ಕಿಂತ ಹೆಚ್ಚು ಬ್ಲಾಕ್‌ಗಳನ್ನು ಒಳಗೊಳ್ಳುವ) ಪ್ರಾಯೋಜನೆಯ ನಿರ್ವಹಣೆಗೆ ಹಾಗೂ ನಿರ್ಧಾರಗಳನ್ನು ಕೈಗೊಳ್ಳಲು ನಿರ್ಣಾಯಕ ಸ್ತರವನ್ನಾಗಿ ನಿರ್ಧರಿಸುವುದಕ್ಕೆ ವಿರುದ್ಧವಾಗಿ, ಬ್ಲಾಕ್‌ಗಳನ್ನು (ಸಾಮಾನ್ಯವಾಗಿ ಸುಮಾರು ನೂರು ಗ್ರಾಮಗಳನ್ನು ಒಳಗೊಂಡ) ರಚಿಸುವ ಪ್ರಯಾತ್ನವು ಲೋಕ್ ಜುಂಬಿಶ್ ಅನ್ನು ಭಾರತದ ಇನ್ನಿತರ ಬಹಳಷ್ಟು ಪ್ರಾಯೋಜನೆಯ ಉಪಕ್ರಮಗಳಿಂದ ಭಿನ್ನವಾಗಿಸುವ ಒಂದು ಅನನ್ಯ ಗುಣವಾಗಿದೆ. ಅದಕ್ಕನುಗುಣವಾಗಿ, ಪ್ರತಿಯೊಂದು ಪ್ರಾಯೋಜನೆಯ ಬ್ಲಾಕ್‌ನಲ್ಲೂ ಬ್ಲಾಕ್ ಕಾರ್ಯ ಸಂಚಾಲಕ ಗುಂಪು (Block Steering Group – BSG (ಬಿಎಸ್‌ಜಿ)) ಅನ್ನು ರಚಿಸಲಾಗುತ್ತದೆ. ಸದ್ಯಕ್ಕೆ, ಲೋಕ್ ಜುಂಬಿಶ್ ರಾಜಸ್ಥಾನದ ನೂರಕ್ಕೂ ಹೆಚ್ಚು ಬ್ಲಾಕ್ ಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ತಮ್ಮ ಬ್ಲಾಕಿನಲ್ಲಿ ನಡೆಸುವ ಎಲ್ಲಾ ಚಟುವಟಿಕೆಗಳಿಗೆ ಒಟ್ಟಾರೆ ಅಧಿಕಾರ ವಹಿಸುವ ಓರ್ವ ಯೋಜನಾಧಿಕಾರಿಯನ್ನು BSG ಒಳಗೊಂಡಿರುತ್ತದೆ. ಜೊತೆಗೆ BSG ಇಬ್ಬರು ಸಹಾಯಕ ಯೋಜನಾಧಿಕಾರಿಗಳು (ಓರ್ವ ಅನೌಪಚಾರಿಕ ಶಿಕ್ಷಣದ ವಿಶೇಷಜ್ಞ (non-formal education- NFE(ಎನ್‌ಎಫ್‌ಇ)) ಹಾಗೂ ಮತ್ತೊರ್ವ ಶಿಕ್ಷಕ-ಶಿಕ್ಷಣ ತಜ್ಞ) ಹಾಗೂ ಓರ್ವ ಮಹಿಳಾ ಕಾರ್ಯಕರ್ತೆಯನ್ನೂ ಸಹ ಒಳಗೊಳ್ಳುತ್ತದೆ. ಲೋಕ್ ಜುಂಬಿಶ್‌ನ ಕಾರ್ಯಾಚರಣೆಗಾಗಿ, ಬ್ಲಾಕ್ ಅನ್ನು 20ರಿಂದ 25 ಗ್ರಾಮಗಳಿರುವ, ನಿರ್ವಹಿಸಲು ಸಾಧ್ಯವಾಗುವ ಕ್ಲಸ್ಟರುಗಳಾಗಿ ವಿಂಗಡಿಸಲಾಗುತ್ತದೆ. ತದನಂತರ, ಲೋಕ್ ಜುಂಬಿಶ್‌ನ ಚಟುವಟಿಕೆಗಳನ್ನು ಸ್ಥಳೀಯ ಸರ್ಕಾರೇತರ ಸಂಸ್ಥೆ ಅಥವಾ BSG ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಉದ್ದೇಶಕ್ಕಾಗಿ ಮೂರರಿಂದ ನಾಲ್ಕು ಕ್ಷೇತ್ರಕಾರ್ಯಕರ್ತರನ್ನು ಪ್ರತಿ ಕ್ಲಸ್ಟರಿನಲ್ಲೂ ನೇಮಿಸಲಾಗುತ್ತದೆ.

**ಖಂಡ ಸ್ತರೀಯ ಶಿಕ್ಷಾ ಪ್ರಬಂಧಕ್ ಸಮಿತಿ (KSPS(ಕೆಎಸ್ ಪಿಎಸ್))**

ಖಂಡ ಸ್ತರೀಯ ಶಿಕ್ಷಾ ಪ್ರಬಂಧಕ್ ಸಮಿತಿ (Khanda Stariya Siksha Prabandhak Samiti – KSPS(ಕೆಎಸ್ ಪಿಎಸ್) ಯನ್ನು, ಅಂದರೆ ಬ್ಲಾಕ್ ಸ್ತರದ ಶಿಕ್ಷಣ ನಿರ್ವಹಣಾ ಸಮಿತಿಯನ್ನು ಪ್ರತಿ ಬ್ಲಾಕ್‌ನಲ್ಲೂ ಸ್ಥಾಪಿಸಲಾಗಿದ್ದು, ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯಲು, ಪ್ರಾಥಮಿಕ ಶಾಲೆಗಳನ್ನು ಉನ್ನತ ಪ್ರಾಥಮಿಕ ಶಾಲೆಯ ಪದವಿಗೇರಿಸಲು, ಶಿಕ್ಷಕರಿಗಾಗಿ ಹುದ್ದೆಗಳನ್ನು ತೆರೆಯಲು ಇವೇ ಮೊದಲಾದ ಅಧಿಕಾರಗಳನ್ನು ಇದಕ್ಕೆ ನೀಡಲಾಗಿರುತ್ತದೆ. ಸಾಮಾನ್ಯವಾಗಿ, ಆ ಬ್ಲಾಕ್‌ಗೆ ಸೇರಿದವರಾದ ಶಿಕ್ಷಣತಜ್ಞರೊಬ್ಬರು ಈ ಸಮಿತಿಯ

ಮುಂದಾಳತ್ವ ವಹಿಸಿದ್ದು, ಲೋಕ್ ಜುಂಬಿಶ್‌ನ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ಸ್ಥಳೀಯ ಸಂಸ್ಥೆಯಿಂದ, ಶಿಕ್ಷಕರ ಕೂಟಗಳಿಂದ ಬಂದ ಪ್ರತಿನಿಧಿಗಳು, ಮಹಿಳಾ ಕಾರ್ಯಕರ್ತರು ಮುಂತಾದಂತವರನ್ನು ಈ ಸಮಿತಿಯು ಒಳಗೊಂಡಿರುತ್ತದೆ. ಬ್ಲಾಕ್ ಸ್ತರದ ಶಿಕ್ಷಣ ನಿರ್ವಹಣಾ ಸಮಿತಿಯ ಸದಸ್ಯರು ಕ್ಲಸ್ಟರ್ ಕಾರ್ಯನಿರ್ವಾಹಕರ ಮೂಲಕ ತಮ್ಮೆಡೆಗೆ ಬರುವ ಎಲ್ಲಾ ಗ್ರಾಮ ಪ್ರಸ್ತಾವಗಳನ್ನು ಒಪ್ಪಿಗೆಗಾಗಿ ಪರಿಶೀಲಿಸುತ್ತಾರೆ.

**ಮುಖ್ಯ ತಂಡ ಹಾಗೂ ಮಹಿಳಾ ಗುಂಪು**

ಶಿಕ್ಷಣದಲ್ಲಿ ತಮಗಿರುವ ಆಸಕ್ತಿಯಿಂದ ಗುರುತಿಸಿಕೊಂಡಿರುವ 10ರಿಂದ 12 ಮಂದಿ 'ಪ್ರಚೋದಕ'ರನ್ನು (ಪುರುಷರು ಮತ್ತು ಸ್ತ್ರೀಯರು ಸಮಸಂಖ್ಯೆಯಲ್ಲಿ) ಒಳಗೊಂಡಿರುವ ಮುಖ್ಯ ತಂಡ ಅಥವಾ ಪ್ರೇರಕ ದಳ ಎಂದು ಕರೆಯಲಾಗುವ ಸಣ್ಣ ಗುಂಪೊಂದರ ಮೂಲಕ ಗ್ರಾಮಸ್ತರದ ಕ್ರಿಯೆಗಳನ್ನು ರೂಪಿಸಿ, ಸಮನ್ವಯಗೊಳಿಸಲಾಗುತ್ತದೆ. ಪ್ರತಿ ಗ್ರಾಮದಲ್ಲಿನ ಲೋಕ್ ಜುಂಬಿಶ್‌ನ ಕ್ಲಸ್ಟರ್ ಸ್ತರದ ಕಾರ್ಯಕರ್ತರು ಪ್ರಾಥಮಿಕ ಸಂಪರ್ಕ ಸಾಧಿಸಿ, ಪರಿಸರ ನಿರ್ಮಿಸಿದ ಬಳಿಕ ಇವನ್ನು ಸ್ಥಾಪಿಸುತ್ತಾರೆ. ಈ ಮುಖ್ಯ ತಂಡಕ್ಕೆ, ಇತರ ವಿಷಯಗಳೂ ಸೇರಿದಂತೆ, ಶಾಲಾ ನಕ್ಷೆ ತಯಾರಿಸುವಿಕೆ (school-mapping – SM (ಎಸ್‌ಎಮ್)ಯ ತಂತ್ರಗಳಲ್ಲಿ ತರಬೇತಿ ನೀಡಲಾಗುತ್ತದೆ. ಮಹಿಳಾ ಗುಂಪು ಅಥವಾ ಮಹಿಳಾ ಸಮೂಹವೊಂದನ್ನು ಸಹ ಪ್ರತಿ ಗ್ರಾಮದಲ್ಲೂ ಸ್ಥಾಪಿಸಲಾಗುತ್ತದೆ. ಪ್ರತಿ ಗ್ರಾಮದಲ್ಲೂ ಈ ಮಹಿಳಾ ಗುಂಪು ಏಳರಿಂದ ಎಂಟು ಗ್ರಾಮ ಮಹಿಳೆಯರಿಂದ ಕೂಡಿದ್ದು, ಅದು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಕಾರ್ಯನಿರತವಾಗಿ, ಗ್ರಾಮ ಶಿಕ್ಷಣ ಸಮಿತಿ (Village Education Committee-VEC (ವಿಇಸಿ))ಯ ರಚನೆಯಾದ ಬಳಿಕ ಅದರೊಳಗೆ ಒಂದು ಕ್ರಿಯಾಶೀಲ ಗುಂಪನ್ನು ರಚಿಸಿಕೊಂಡು ಇತರ ಮಹಿಳೆಯರ ಅಭಿವೃದ್ಧಿ ಚಟುವಟಿಕೆಗಳಲ್ಲಿಯೂ ಸಹ ತನ್ನನ್ನು ತೊಡಗಿಸಿಕೊಳ್ಳುತ್ತದೆ ಎಂದು ಕಲ್ಪಿಸಲಾಗಿದೆ. ಶಾಲಾ ಕಟ್ಟಡ ನಿರ್ಮಾಣ ಹಾಗೂ ದುರಸ್ತಿಯ ಮೇಲ್ವಿಚಾರಣೆ ನೋಡಿಕೊಳ್ಳುವ ಐದರಿಂದ ಆರು ಸಮುದಾಯದ ಸದಸ್ಯರಿಂದ ಕೂಡಿದ ಕಟ್ಟಡ ನಿರ್ಮಾಣ ಸಮಿತಿ ಅಥವಾ ಭವನ ನಿರ್ಮಾಣ ಸಮಿತಿಯೊಂದನ್ನು ರಚಿಸಲಾಗುತ್ತದೆ. ಮುಖ್ಯ ತಂಡ ಹಾಗೂ ಮಹಿಳಾ ಗುಂಪುಗಳಿಗೆ ಮಾತ್ರ ಅಲ್ಲದೆ ಗ್ರಾಮ ಶಿಕ್ಷಣ ಸಮಿತಿಗಳಿಗೂ ಒಂದು ತರಬೇತಿ ಹಾಗೂ ಸಂಪನ್ಮೂಲ ವ್ಯವಸ್ಥೆಯ ರಚನೆಗೆ ಅಡಿಪಾಯವಾಗಿ ಆಯ್ದ ಕ್ಲಸ್ಟರುಗಳಲ್ಲಿ ಕ್ಷೇತ್ರಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಈ ಕ್ಷೇತ್ರಕೇಂದ್ರವು ಅನೌಪಚಾರಿಕ ಶಿಕ್ಷಣ ಕಾರ್ಯಕರ್ತರು ಹಾಗೂ ಶಾಲಾಶಿಕ್ಷಕರಿಗೆ ಒಂದು ಸಂಪನ್ಮೂಲ ಕೇಂದ್ರವಾಗಿಯೂ ಸಹ ಕಾರ್ಯನಿರ್ವಹಿಸುವುದು ಎಂದು ನಿರೀಕ್ಷಿಸಲಾಗಿದೆ.

## ಲೋಕ್ ಜುಂಬಿಶ್ ನ ಮುಖ್ಯ ಕಾರ್ಯತಂತ್ರಗಳು

ಲೋಕ್ ಜುಂಬಿಶ್ ನ ಉದ್ದೇಶ ಜನರ, ಅದರಲ್ಲೂ ವಿಶೇಷವಾಗಿ ಮಹಿಳೆಯರ, ಸಬಲೀಕರಣ ಹಾಗೂ ಮೂಲ ಶಿಕ್ಷಣಕ್ಕೆ ಕೆಳ ಸ್ತರದಿಂದ ಪುನಶ್ಚೇತನ ನೀಡುವುದಾಗಿರುವುದರಿಂದ, ಯೋಜನೆಯ ಆಯೋಜನೆ ಹಾಗೂ ಅನುಷ್ಠಾನವನ್ನು ನಿಯಂತ್ರಿಸಲಿರುವ ಪ್ರಕ್ರಿಯೆಗಳಿಗೆ ಹಾಗೂ ಕಾರ್ಯತಂತ್ರಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಕಲ್ಪಿಸಲಾದ ಮುಖ್ಯ ಕಾರ್ಯತಂತ್ರಗಳು ಇಂತಿವೆ:

**ಜನರ ಪಾಲ್ಗೊಳ್ಳುವಿಕೆ**: ಸೂಕ್ಷ್ಮ-ಆಯೋಜನೆಯನ್ನು ಕೈಗೊಳ್ಳುವಂತೆ, ಎಲ್ಲಾ ಮಕ್ಕಳೂ ಪ್ರಾಥಮಿಕ ಶಿಕ್ಷಣ ಪಡೆಯುವುದನ್ನು ಖಾತ್ರಿಪಡಿಸಲು ನೆರವಾಗುವಂತೆ, ಹಾಗೂ ಮೂಲಭೂತ ಶಿಕ್ಷಣ  ವ್ಯವಸ್ಥೆಯು ಅದಕ್ಕೆ ಉತ್ತರವಾದಿ ಅಗಿರುವಂತೆ ಗ್ರಾಮ ಸಮುದಾಯವನ್ನು ಸಕ್ರಿಯಕರಣಗೊಳಿಸುವುದು,

**ವಿಕೇಂದ್ರೀಕೃತ ನಿರ್ವಹಣೆ:** ಲೋಕ್ ಜುಂಬಿಶ್ ಪರಿಷತ್ತು ಸಾದರಪಡಿಸುವ ಮಾನದಂಡಗಳು ಹಾಗೂ ಮಾರ್ಗಸೂಚಿಗಳ ಅನ್ವಯ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವನ್ನು ಬ್ಲಾಕ್ ಹಾಗೂ ಗ್ರಾಮ ಸ್ತರಗಳಿಗೆ ವರ್ಗಾಯಿಸುವುದು.

**ಶಿಕ್ಷಕರ ಒಳಗೊಳ್ಳುವಿಕೆ:** ಶಿಕ್ಷಕರ ಸ್ಥಾನಮಾನವನ್ನು ಪುನಃಸ್ಥಾಪಿಸುವುದು ಹಾಗೂ ಅವರಲ್ಲಿ ವೃತ್ತಿಯ ಬಗ್ಗೆ ಹೆಮ್ಮೆ ಮೈದಳೆಯುವಂತಾಗಲು ಕ್ರಮಗಳನ್ನು ಕೈಗೊಳ್ಳುವುದು, ಹಾಗೂ ಎಲ್ಲಾ ಸ್ತರಗಳಲ್ಲಿಯೂ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅವರ ಸಂಘಟನೆಗಳು ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು ಸಹ.

**ಸಿಬ್ಬಂದಿ ತರಬೇತಿ:** ಶೈಕ್ಷಣಿಕ ಸುಧಾರಣೆಗಳ ಬಗ್ಗೆ ಶಿಕ್ಷಕರ ಧೋರಣೆಯನ್ನು ಬದಲಿಸುವ ಹಾಗೂ ಅವರ ಕೌಶಲಗಳನ್ನು ಸುಧಾರಿಸುವ ಕಡೆಗೆ ಗಮನವನ್ನು ಕೇಂದ್ರೀಕರಿಸುವುದು; ಜೊತೆಗೆ, ಗ್ರಾಮ ಸಮುದಾಯದ ಸದಸ್ಯರು ತಮ್ಮ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಅವರನ್ನು ಸಶಕ್ತಗೊಳಿಸಲು ಅವರಿಗೆ ತರಬೇತಿ ನೀಡುವುದು.

**ಗುಣಮಟ್ಟ ಸುಧಾರಣೆ:** ಶಿಕ್ಷಕರ ಕರ್ತವ್ಯ ನಿರ್ವಹಣೆಯಲ್ಲಿ ಸುಧಾರಣೆ, ಮಾನದಂಡ ಆಧಾರಿತ ಸೌಕರ್ಯಗಳ ಒದಗಣೆ ಹಾಗೂ ಶಿಕ್ಷಣ ವಿಷಯ ಮತ್ತು ಪ್ರಕ್ರಿಯೆಗಳಲ್ಲಿನ ಮಾರ್ಪಾಡುಗಳ ಮೂಲಕ ಇದನ್ನು ಸಾಧಿಸುವುದು.

**ಮೌಲ್ಯಮಾಪನ :** ಬೋಧನೆಯ ಪ್ರಕ್ರಿಯೆಯಲ್ಲಿ ಹಾಗೂ ಶಾಲಾ ನಿರ್ವಹಣೆಯಲ್ಲಿಯೂ ಸಹ ಇದನ್ನೊಂದು ನಿರಂತರ ಹಾಗೂ ಅಂಗಭೂತ ಚಟುವಟಿಕೆಯಾಗಿ ನಡೆಸುವುದು.

## ಮುಖ್ಯ ಅಂಶವಾಗಿ ಶಾಲಾ ನಕ್ಷೆ ತಯಾರಿಸುವಿಕೆ

ಲೋಕ್ ಜುಂಬಿಶ್ ನ ವಿಶಾಲವಾದ ಗುರಿಗಳ ಸಮುಚ್ಚಯವನ್ನು ಅನುಸರಿಸುವಲ್ಲಿ ಶಾಲಾ ನಕ್ಷೆ ತಯಾರಿಸುವಿಕೆ ಒಂದು ಶಕ್ತಿಯುತ ಸಾಧನವನ್ನಾಗಿ ಪರಿಗಣಿಸಲಾಗಿದೆ ಮತ್ತು ಸುಧಾರಣೆಗಾಗಿ ಉಳಿದ ಕ್ರಿಯೆಗಳನ್ನು ಉಪಕ್ರಮಿಸುವ ಮೊದಲೇ ಅಗ್ರಗಣ್ಯ ಕಾರ್ಯದಂತೆ ಅದನ್ನು ಕಾರ್ಯಗತಗೊಳಿಸಬೇಕಿದೆ.

**Foot notes**

1. Lok Jumbish: A movement for universalization of primary education in Rajasthan, Lok Jumbish Parishad, Jaipur,1997.
2. Selected Educational Statistics: As on 30 September 1995, Government of India, Ministry of Human Resource Development, New Delhi, 1996.
3. Contents of this section on Lok Jumbish, its goals, institutional framework and strategies are essentially extracts from the Appendix contained in Lok Jumbish: Second Report, Lok Jumbish Parishad, Jaipur, May 1993, pp.48-50.

## ಅಧ್ಯಾಯ 2

# ಲೋಕ್ ಜುಂಬಿಶ್ ನಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ರೂಪರೇಖೆಗಳನ್ನು ಶೋಧಿಸುವುದು: ಒಂದು ಪರಿಕಲ್ಪನಾತ್ಮಕ ವಿಶ್ಲೇಷಣೆ

## ಶಾಲಾ ನಕ್ಷೆ ತಯಾರಿಸುವಿಕೆ ಹಾಗೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣ

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣವನ್ನು ಸಾಧಿಸಲು ಸೂಕ್ತ ಸ್ಥಳಗಳಲ್ಲಿ ಶಾಲಾಶಿಕ್ಷಣ ಸೌಕರ್ಯಗಳನ್ನು ಒದಗಿಸುವುದು ಒಂದು ಅತ್ಯಗತ್ಯ ಪೂರ್ವಭಾವಿ ಷರತ್ತಾಗಿದೆ. ಆದರೆ, ಎಲ್ಲಾ ಮಕ್ಕಳೂ ಶಾಲೆಗೆ ಹೋಗಿ ತಮ್ಮ ಪ್ರಾಥಮಿಕ ಶಿಕ್ಷಣ ಮುಗಿಸುತ್ತಾರೆ ಎಂಬುದನ್ನು ಖಾತ್ರಿಪಡಿಸಲು ಒದಗಣೆಯಷ್ಟೇ ಸಾಲದಾಗುತ್ತದೆ. ಇದು, ವಾಸ್ತವವಾಗಿ, ರಾಜಸ್ಥಾನವು ಎದುರಿಸುತ್ತಿರುವ ಇಕ್ಕಟ್ಟಿನ ಪರಿಸ್ಥಿತಿ. ಅಧಿಕೃತ ಅಂಕಿ-ಅಂಶಗಳು ಎಲ್ಲಾ ಮಕ್ಕಳಿಗೂ ತಕ್ಕಮಟ್ಟಿಗೆ ಅನುಕೂಲವೆನ್ನಬಹುದಾದ ದೂರದಲ್ಲಿ ಶಾಲಾಶಿಕ್ಷಣ ಸೌಕರ್ಯಗಳು ಲಭ್ಯವಿದೆ ಎಂದು ಸೂಚಿಸುತ್ತವೆ. ಕುತೂಹಲಕಾರಿ ಸಂಗತಿಯೆಂದರೆ, ರಾಜಸ್ಥಾನವು ದೇಶದ ಸುಮಾರು ಶೇಕಡಾ 10ರಷ್ಟು ಭೂಭಾಗವನ್ನು ಹೊಂದಿದ್ದರೂ, ಅದರ ಜನಸಂಖ್ಯೆ ದೇಶದ ಶೇಕಡಾ 5ಕ್ಕಿಂತಲೂ ಕಡಮೆ ಇದೆ. ಇದು ರಾಜ್ಯದಲ್ಲಿ ಜನಸಂಖ್ಯಾ ನಿಬಿಡತೆ ಬೇರೆ ರಾಜ್ಯಗಳಿಗಿಂತ ಬಹಳಷ್ಟು ಕಡಮೆ ಇದೆ ಎಂದೂ, ಜನವಸತಿಗಳು ಸಣ್ಣವೆಂದೂ, ಮತ್ತು ಸಾಮಾನ್ಯವಾಗಿ ಒಂದರಿಂದ ಮತ್ತೊಂದು ದೂರದಲ್ಲಿರುವುದೆಂದೂ ತೋರಿಸುತ್ತದೆ. ಆದ್ದರಿಂದ, ಶಾಲಾಶಿಕ್ಷಣ ಸೌಕರ್ಯಗಳು ಅನುಕೂಲಕರ ದೂರದಲ್ಲಿ ಲಭ್ಯವಿದೆಯೆಂಬ ಗೃಹೀತವನ್ನೂ ಕೂಡ ಸೂಕ್ಷ್ಮವಾಗಿ ಪರಿಶೀಲಿಸಬೇಕಾಗುತ್ತದೆ. ಶಾಲಾಶಿಕ್ಷಣ ಸೌಕರ್ಯಗಳಿಗೆ ಲಭ್ಯಾವಕಾಶಗಳಂತಹ ಸಮಸ್ಯೆಗಳನ್ನು ಪರಿಹರಿಸಲು ಸಾಂಪ್ರದಾಯಿಕವಾಗಿ ಶಾಲಾ ನಕ್ಷೆ ತಯಾರಿಸುವಿಕೆ ಹಾಗೂ ಸೂಕ್ಷ್ಮ-ಆಯೋಜನೆಯ ತಂತ್ರಗಳನ್ನು ಶಾಲೆಯ ಸ್ಥಳವನ್ನು ವಿವೇಕಯುಕ್ತವಾಗಿ ನಿರ್ಧರಿಸುವುದಕ್ಕೆ ಬಳಸಿಕೊಳ್ಳಲಾಗಿದೆ.

ಶೈಕ್ಷಣಿಕ ಸೌಕರ್ಯಗಳ ವಿವೇಕಯುಕ್ತ ಹಂಚಿಕೆಯು ಕಲಿಕಾರ್ಥಿಗಳು ಮತ್ತು ಶಾಲೆಯ ನಡುವಿನ ವಾಸ್ತವಿಕ ದೂರಗಳ ಅಂತರವನ್ನು ಕಡಮೆಮಾಡಬಹುದಾದರೂ ಅದು ಇನ್ನೂ ಸಹ ಬಹುತೇಕ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ವ್ಯಾಪ್ತಿಯಿಂದ ಹೊರ ಉಳಿಯುವಂತೆ ಮಾಡಬಹುದು. ವಾಸ್ತವಿಕವಾಗಿ, ರಾಜಸ್ಥಾನದಲ್ಲಿನ ಪರಿಸ್ಥಿತಿ ಇದೇ ಆಗಿದೆ. ಇಲ್ಲಿನ ಪ್ರತಿಬಂಧಕವು ಯಾವುದೇ ಭೌತಿಕ ದೂರವಲ್ಲ, ಬದಲಿಗೆ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಡ್ಡಗೋಡೆಗಳಾಗಿವೆ. ಆದ್ದರಿಂದ, ಉದ್ದೇಶವು ಎಲ್ಲಾ ಮಕ್ಕಳೂ ಶಾಲೆಗೆ ಬರುವಂತೆ ಮಾಡಿ, ಅವರು ತಮ್ಮ ಪ್ರಾಥಮಿಕ ಶಿಕ್ಷಣದ ಪೂರ್ಣಾವಧಿಯನ್ನು ಮುಗಿಸುತ್ತಾರೆ ಎಂಬುದನ್ನು ಖಾತ್ರಿಪಡಿಸಬೇಕೆಂದರೆ, ಕೇವಲ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳ ಮೂಲಕ ದೂರದ ಮಾತೃಕೆಗಳನ್ನು ಸಿದ್ಧಪಡಿಸುವುದಷ್ಟೇ ಸಮಸ್ಯೆಯನ್ನು ಬಗೆಹರಿಸಲಾರದು. ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನವು ತಾಂತ್ರಿಕ ಎಣಿಕೆಯಂತಹ ವಿಷಯವನ್ನು ಮೀರಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಸ್ಥಳೀಯವಾಗಿ ಪ್ರಸ್ತುತವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿಯತಾಂಕಗಳನ್ನು ಆಯೋಜನೆಯ ಚೌಕಟ್ಟಿನಲ್ಲಿ ಸೇರಿಸಿಕೊಳ್ಳಬೇಕಾಗಿದೆ. ಸಮಸ್ಯೆಯ ವಿಶ್ಲೇಷಣೆ ಹಾಗೂ ನಿರ್ಧಾರ ಕೈಗೊಳ್ಳುವಿಕೆ ಎರಡನ್ನೂ ದೂರ ಹಾಗೂ

ಆರ್ಥಿಕ ಕಾರಣಗಳೂ ಸೇರಿದಂತೆ ಸ್ಥಳೀಯ ಸಾಮುದಾಯಿಕ ನಿಯತಾಂಕಗಳ ಮೇಲೆ ಆಧರಿಸಬೇಕೆಂಬ ಸಲುವಾಗಿ ಲೋಕ್ ಜುಂಬಿಶ್ ಅಂತಹದೊಂದು ಶಾಲಾ ನಕ್ಷೆ ತಯಾರಿಸುವಿಕೆಯ ತಾಂತ್ರಿಕ ಪ್ರಯತ್ನದ ವಿಶದೀಕರಣವನ್ನು ಮಾಡಲು ಯತ್ನಿಸುತ್ತದೆ. ಪ್ರಸ್ತುತ ಅಧ್ಯಯನದ ಒಟ್ಟಾರೆ ಗುರಿಯು ಲೋಕ್ ಜುಂಬಿಶ್ ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಗೆ ಅಳವಡಿಸಿಕೊಂಡ ಈ ವಿಸ್ತೃತ ವಿಧಾನವನ್ನು ಪರಿಶೀಲಿಸುವುದೇ ಆಗಿದೆ. ಈಗಾಗಲೇ ಸಾಕಷ್ಟು ಕಾಲದಿಂದ ಅಂತರರಾಷ್ಟ್ರೀಯವಾಗಿ ಮಾತ್ರವಲ್ಲದೆ ಭಾರತದಲ್ಲಿಯೂ ಕೂಡಾ 'ಶಾಲಾ ನಕ್ಷೆ ತಯಾರಿಸುವಿಕೆ'ಯ ಪರಿಕಲ್ಪನೆ ಹಾಗೂ ಕಾರ್ಯರೀತಿಗಳನ್ನು ಬಳಸಲಾಗಿದೆ ಎಂಬುದನ್ನು ಗಮನಿಸುವುದು ಇಲ್ಲಿ ಮುಖ್ಯ. ಆದ್ದರಿಂದ, ಲೋಕ್ ಜುಂಬಿಶ್‌ನ ಹೊರಗೆ 'ಶಾಲಾ ನಕ್ಷೆ ತಯಾರಿಸುವಿಕೆ' ಪಡೆದಿರುವ ಸೂಚಿತಾರ್ಥಗಳನ್ನು ಮರುಪರಿಶೀಲನೆ ಮಾಡುವುದು ಪ್ರಸ್ತುತವಾಗುತ್ತದೆ.

## ಲೋಕ್ ಜುಂಬಿಶ್ ನ ಶಾಲಾ ನಕ್ಷೆ ತಯಾರಿಸುವಿಕೆಯ ವಿಧಾನವನ್ನು ರಾಷ್ಟ್ರೀಯ ದೃಷ್ಟಿಕೋನದ ಚೌಕಟ್ಟಿನಲ್ಲಿ ಇರಿಸುವುದು

1984ರಲ್ಲಿ ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಹಾಗೂ ಆಡಳಿತ ಸಂಸ್ಥೆ (National Institute of Educational Planning and Administration) ಆಯೋಜಿಸಿದ ರಾಷ್ಟ್ರೀಯ ಕಾರ್ಯಾಗಾರದ ಮೂಲಕ ಶಾಲಾ ನಕ್ಷೆ ತಯಾರಿಸುವಿಕೆಯು ಭಾರತದಲ್ಲಿ ಶೈಕ್ಷಣಿಕ ಯೋಜನೆಯ ಬಗೆಗಿನ ಸಂವಾದದ ಭಾಗವಾಯಿತು. ಈ ಕಾರ್ಯಾಗಾರವು ಸಾಂಪ್ರದಾಯಿಕ ವ್ಯಾಖ್ಯೆಯೊಂದನ್ನು ಅಳವಡಿಸಿಕೊಂಡಿತು: "ಶಾಲಾ ನಕ್ಷೆ ತಯಾರಿಸುವಿಕೆ ಎಂಬುದು ವಿಸ್ತರಣೆಗೆ ಬೇಕಿರುವ ಒಂದು ಪ್ರದೇಶವನ್ನು ಗುರುತುಮಾಡುವುದನ್ನು ಹಾಗೂ ನಿರ್ಧಾರಿತ ಮಾನದಂಡಗಳಿಗೆ ಅನುಗುಣವಾಗಿ ಶೈಕ್ಷಣಿಕ ಸೌಕರ್ಯಗಳನ್ನೂ ಸಹ ವಿವೇಕಯುಕ್ತವಾಗಿ ನಿರ್ಧರಿಸುವ ಪ್ರಕ್ರಿಯೆಯಾಗಿದೆ. ಇದು ಸ್ಥಳ ಸಂಬಂಧಿ ಅಂಶಗಳನ್ನಷ್ಟೇ ಅಲ್ಲದೆ, ಉದ್ದೇಶಿತ ಹಾಗೂ ಅಸ್ತಿತ್ವದಲ್ಲಿರುವ ಶಾಲೆಗಳ ಒದಗಣೆಯನ್ನು ಒಳಗೊಳ್ಳುತ್ತದೆ." ಈ ವ್ಯಾಖ್ಯೆಯು ಮೂಲಭೂತವಾಗಿ ಶೈಕ್ಷಣಿಕ ಸೌಲಭ್ಯಗಳ ಸ್ಥಳ ಅಭಿವೃದ್ಧಿಗೆ ಬೇಕಿರುವ ಮಾನದಂಡಗಳ ಮೇಲೆ ಗಮನ ಕೇಂದ್ರೀಕರಿಸಿತ್ತು. ಪ್ರಾಥಮಿಕ ಶಾಲೆಗಳ ಸ್ಥಾಪನೆಗೆ ಜಾಗವನ್ನು ಗುರುತಿಸಲು ದೂರಕ್ಕೆ ಸಂಬಂಧಿಸಿದ ಮಾನದಂಡಗಳನ್ನು ನಿರ್ದಿಷ್ಟಪಡಿಸುವ ಅಗತ್ಯವು ಭಾರತದಲ್ಲಿನ ಶೈಕ್ಷಣಿಕ ಆಯೋಜಕರ ಗಮನವನ್ನು ಇದಕ್ಕೂ ಬಹಳ ಹಿಂದೆಯೇ ಸೆಳೆದಿತ್ತು ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು. ಇದು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿಯ ಪರಿಷತ್ತು (National Council of Educational Research and Training) 1968ರಲ್ಲಿ ನಡೆಸಿದ ಎರಡನೇ ಅಖಿಲ ಭಾರತ ಶಿಕ್ಷಣ ಸಮೀಕ್ಷೆಯ ಫಲಿತಾಂಶಗಳನ್ನು ಆಧರಿಸಿತ್ತು. ಈ ಸಮೀಕ್ಷೆಯನ್ನು ಅನುಸರಿಸಿ, ಸರ್ಕಾರವು ಎಲ್ಲಾ ಗ್ರಾಮಗಳಲ್ಲಿಯೂ ಅದರಿಂದ 1.5 ಕಿಮೀ ಅಷ್ಟು 'ನಡೆಯುವ ದೂರ' ದ ಒಳಗೆ ಪ್ರಾಥಮಿಕ ಶಾಲೆಯನ್ನು ಹಾಗೂ 3 ಕಿಮೀ ದೂರದ ಒಳಗೆ ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸುವ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕಾರ್ಯನಿರತವಾಯಿತು. ಇತ್ತೀಚಿನ ಮೌಲ್ಯಮಾಪನಗಳು ಮೇಲಿನ ವಿಶೇಷ ವಿವರಗಳನ್ನು ದೇಶದ ಶೇಕಡಾ 95ಕ್ಕೂ ಹೆಚ್ಚು ಗ್ರಾಮಗಳಲ್ಲಿ ಸಾಧಿಸಲಾಗಿದೆ ಎಂದು ಸೂಚಿಸುತ್ತದೆ. ಈ ಮಾನದಂಡಾಧಾರಿತ ಶೈಕ್ಷಣಿಕ ಸೌಲಭ್ಯಗಳ ಪೂರೈಕೆ ಇದ್ದರೂ, ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳ ಪಾಲ್ಗೊಳ್ಳುವಿಕೆಯ ಗುರಿಯು ದೇಶದ ಹಲವು ಭಾಗಗಳಲ್ಲಿ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

ಲೋಕ್ ಜುಂಬಿಶ್ 1992ರಲ್ಲಿ ತನ್ನ ಕಾರ್ಯಾಚರಣೆಗಳನ್ನು ಆರಂಭಿಸಿದಾಗ, ರಾಜಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು, ಪ್ರತಿ ಗ್ರಾಮದಿಂದ 'ನಡೆಯುವ ದೂರ' ದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಒದಗಿಸುವ ವಿಚಾರದಲ್ಲಿ

ಪರಿಮಾಣಾತ್ಮಕವಾಗಿ ಸಾಕಷ್ಟು ಅಭಿವೃದ್ಧಿ ಸಾಧಿಸಿದಂತೆ ತೋರಿತು. ಆದರೆ ಇನ್ನೂ ಗಾಢವಾದ ವಿಶ್ಲೇಷಣೆಯು, ನಿಜವಾದ ಅರ್ಥದಲ್ಲಿ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಿ ಲಭ್ಯವಾಗುವಂತೆ ಅವಕಾಶಗಳನ್ನು ಒದಗಿಸುವುದರಲ್ಲಿ ಒದಗಣೆಯ ಮೇಲಿನ ಈ ಸ್ಥೂಲ-ದೃಷ್ಟಿಕೋನಕ್ಕೆ ಗಂಭೀರ ಮಿತಿಗಳಿದ್ದವು ಎಂಬುದನ್ನು ಬಯಲುಮಾಡಿತು. ಮೊದಲಿಗೆ, ದೂರವನ್ನು ಅಪರಿವರ್ತನೀಯವಾಗಿ ಅಷ್ಟು ಸುಲಭಗಮ್ಯವಾಗಿರದ ಹಾಗೂ ಸಾಮಾನ್ಯವಾಗಿ ಮುಖ್ಯ ಗ್ರಾಮದಿಂದ ಗಣನೀಯ ದೂರ ಮತ್ತು ದುರ್ಗಮ ಭೂಪ್ರದೇಶಗಳಲ್ಲಿದ್ದ ಕೊಪ್ಪಲುಗಳನ್ನು ಪರಿಗಣಿಸದೆ ಮುಖ್ಯ ಗ್ರಾಮಕ್ಕೆ ಸಂಬಂಧಿಸಿದಂತೆ ನೋಡಲಾಗಿತ್ತು. ಎರಡನೆಯದಾಗಿ, ಇದು ಸಾಮಾನ್ಯವಾಗಿ ಗ್ರಾಮವು ಸಾಮಾಜಿಕ ಗುಂಪುಗಳಿಗೆ ನಿಕಟ ಹೊಂದಾಣಿಕೆ ಇರುವ ವಿವಿಧ ಕೊಪ್ಪಲು ಅಥವಾ ನೆಲೆಸುವ ಸ್ಥಳಗಳಾಗಿ ವಿಂಗಡಿಸಲಾಗಿರುವುದನ್ನು (ಇಂದೂ ಕೂಡ ಇದು ಹೀಗೇ ಇದೆ) ಕಡೆಗಣಿಸಿದ್ದರಿಂದ ಕೆಲವು ಸಮುದಾಯಗಳು ಹಾಗೂ ಜಾತಿ ಗುಂಪುಗಳಿಗೆ ಅನಿವಾರ್ಯವಾಗಿ ಪ್ರತಿಕೂಲವಾಗಿತ್ತು; ಮತ್ತು ವಿಧ್ಯುಕ್ತ ಪ್ರಾಥಮಿಕ ಶಿಕ್ಷಣದಿಂದ ಬಹುತೇಕ ವಂಚಿತರಾಗಿದ್ದ ಮಕ್ಕಳು ಈ ವರ್ಗಗಳಿಗೆ ಸೇರಿದವರೇ ಆಗಿದ್ದರು! ಮೂರನೆಯದಾಗಿ, ಇದು ಪ್ರಾಥಮಿಕ ಶಿಕ್ಷಣದ ಒದಗಣೆಯನ್ನು ಏಕರೂಪದ ರೀತಿಯಲ್ಲಿ, ಸಾಮಾನ್ಯವಾಗಿ ಶಾಲಾ ದಿನಸೂಚಿ ಹಾಗೂ ಸಮಯಪಾಲನೆಯ ವಿಷಯದಲ್ಲಿ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ವಿಷಯದಲ್ಲಿ, ಹಾಗೂ ಶಿಕ್ಷಕರ ಆವಶ್ಯಕತೆಯ ವಿಷಯಗಳಲ್ಲಿ ಅನಮ್ಯವಾಗಿರುವ ಕೇವಲ ವಿಧ್ಯುಕ್ತ ಪ್ರಾಥಮಿಕ ಶಾಲೆಗಳನ್ನು ಮಾತ್ರ ಒಳಗೊಂಡಿರುವುದಾಗಿ ಪರಿಗಣಿಸಿತು.

ಲೋಕ್ ಜುಂಬಿಶ್ ಶಾಲಾ ನಕ್ಷೆ ತಯಾರಿಸುವಿಕೆಯನ್ನು ರಾಜಸ್ಥಾನದಲ್ಲಿ ಸಾರ್ವತ್ರಿಕ ಅವಕಾಶಲಭ್ಯತೆ ಹಾಗೂ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವಲ್ಲಿ ವಿಫಲವಾಗಿದ್ದ, ಪ್ರಾಥಮಿಕ ಶಾಲೆಗಳನ್ನು ಒದಗಿಸುವ ಕೇಂದ್ರೀಕೃತ ಆಯೋಜನೆಯಲ್ಲಿನ ಕೆಲವು ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳಲು ಒಂದು ಪರಿಣಾಮಕಾರಿ ಸಾಧನವನ್ನಾಗಿ ಅಳವಡಿಸಿಕೊಳ್ಳಲು ಮುಂದಾಯಿತು. ಆದಾಗ್ಯೂ, ಕೇವಲ ಶಾಲೆಗಳ ಭೌತಿಕ ಸ್ಥಳವನ್ನು ವಿವೇಕಯುಕ್ತವಾಗಿ ನಿರ್ಧರಿಸುವಲ್ಲಿನ ಪ್ರಯತ್ನ ಎಂಬ ಶಾಲಾ ನಕ್ಷೆ ತಯಾರಿಸುವಿಕೆಯ ವ್ಯಾಖ್ಯಾನವು ಎಲ್ಲಾ ಮಕ್ಕಳಿಗೂ ಶಿಕ್ಷಣದ ಆಯೋಜನೆಯ ಅವಶ್ಯಕತೆಗಳನ್ನು ಪೂರೈಸಲು ಅಪರ್ಯಾಪ್ತವಾಗಿತ್ತು. ಲೋಕ್ ಜುಂಬಿಶ್ ಪ್ರಚಲಿತದಲ್ಲಿದ್ದ ಶಾಲಾ ನಕ್ಷೆ ತಯಾರಿಸುವಿಕೆಯ ಕಲ್ಪನೆಗಳಿಂದ ಗಮನಾರ್ಹವಾಗಿ ಭಿನ್ನವಾಗಿದ್ದ ಶಾಲಾ ನಕ್ಷೆ ತಯಾರಿಸುವಿಕೆಯ ಕಾರ್ಯಕ್ರಮವೊಂದನ್ನು ರೂಪಿಸುವ ಪ್ರಯತ್ನಗಳನ್ನು ಕೈಗೊಂಡದ್ದು ಈ ಹಿನ್ನೆಲೆಯಲ್ಲಿ. ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಅದರ ಪರಿಕಲ್ಪನಾತ್ಮಕ ರೂಪರೇಖೆಗಳು ಹಾಗೂ ಕಾರ್ಯಾಚರಣೆಯ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ, ವಾಸ್ತವವಾಗಿ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಗಳನ್ನು ನಡೆಸುವವರಿಂದ ನಿರಂತರವಾಗಿ ರೂಪಿಸಲಾಗುವ ಹಾಗೂ ಮತ್ತೆ-ಮತ್ತೆ ರೂಪಿಸಲ್ಪಡುವ ಒಂದು ವಿಕಸಿಸುತ್ತಿರುವ ವಿದ್ಯಮಾನವನ್ನಾಗಿ ನೋಡಲಾಗಿದೆ.

## ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಗುಣಲಕ್ಷಣಗಳು

ಶಾಲಾ ನಕ್ಷೆ ತಯಾರಿಸುವಿಕೆಯನ್ನು ಇನ್ನೂ ವಿಶಾಲವಾದ ದೃಷ್ಟಿಕೋನದಿಂದ ವ್ಯಾಖ್ಯಾನಿಸಲು, ಮೇಲೆ ಚರ್ಚಿಸಿರುವಂತೆ, ಅದುವರೆಗೂ ಲಭ್ಯವಿದ್ದ ಶಾಲಾ ನಕ್ಷೆ ತಯಾರಿಸುವಿಕೆಯ ಸಾಹಿತ್ಯದಲ್ಲಾಗಲೀ, ಕಾರ್ಯರೀತಿಗಳಲ್ಲಾಗಲೀ, ಅನುಭವಾತ್ಮಕ ಜ್ಞಾನಕ್ಕೆ ಸಂಬಂಧಿಸಿದಂತೆ ಯಾವುದೇ ಗಮನಾರ್ಹ ಮಾರ್ಗದರ್ಶನ

ಕಂಡುಬರಲಿಲ್ಲ. ಏಕೆಂದರೆ, ಅವು ಬಹುತೇಕವಾಗಿ ಬ್ಲಾಕ್ ಹಾಗೂ ಜಿಲ್ಲೆಗಳಿಗೆ ನಡೆಸುವ ಸ್ಥಳ ಸಂಬಂಧಿ-ಯೋಜನಾ ಪ್ರಯತ್ನಗಳನ್ನು, ಶಾಲಾ ಸ್ಥಾಪನೆಯ ಸ್ಥಳಕ್ಕೆ ದೂರ-ಮಾತೃಕೆಗಳ ರಚನೆಗಳನ್ನು ಒಳಗೊಂಡಿದ್ದವು. ಲಭ್ಯವಿದ್ದ ಸಂಬಂಧಿತ ಅನುಭವವೆಂದರೆ ಅದು ಭಾರತೀಯ ಶೈಕ್ಷಣಿಕ ಸಂಸ್ಥೆ (Indian Institute of Education)ಯು ನಡೆಸಿದ ಗ್ರಾಮ ಶಿಕ್ಷಣ ನಕ್ಷೆಗಳ ತಯಾರಿಸುವಿಕೆಯ ಸಾಪೇಕ್ಷವಾಗಿ ಪುಟ್ಟ ಪ್ರಮಾಣದ ಪ್ರಯೋಗವೊಂದೇ ಆಗಿತ್ತು. ಈ ಯೋಜನೆಯ ಅಡಿಯಲ್ಲಿ ಕೈಗೊಂಡ ಪ್ರಯತ್ನಗಳು ಲೋಕ್ ಜುಂಬಿಶ್ ರಾಜಸ್ಥಾನದಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಮೂಲಕ ಕಾರ್ಯಗತಗೊಳಿಸಲು ಬಯಸಿದ್ದ ಕೆಲವು ವಿಚಾರಗಳಿಗೆ ಹತ್ತಿರವಾಗಿ ಸಂಬಂಧಿಸಿದ್ದವು. ಆದ್ದರಿಂದ, ಲೋಕ್ ಜುಂಬಿಶ್ ಕಾರ್ಯತಃ ಮೊದಲಿಂದ ಹೊಸತಾಗಿ ಶಾಲಾ ನಕ್ಷೆ ತಯಾರಿಸುವಿಕೆಯ ವಿಧಾನವೊಂದನ್ನು ವಿನ್ಯಾಸಗೊಳಿಸಲು ಪ್ರಾರಂಭಿಸಬೇಕಿತ್ತು. ಈ ವಿಧಾನವು ಫಲಿತಾಂಶಕ್ಕೆ ಒತ್ತು ನೀಡದೆ ಪ್ರಕ್ರಿಯೆಗೆ ಪ್ರಾಧಾನ್ಯ ನೀಡಿದ್ದು ಅದು ಶಾಲಾ ನಕ್ಷೆ ತಯಾರಿಸುವಿಕೆಯನ್ನು ಸಾಮಾನ್ಯ ಗ್ರಾಮಸ್ಥರು ಸ್ವತಃ ತಾವೇ ಕೈಗೊಳ್ಳಬಹುದಾದ ಸರಳ ಪ್ರಯತ್ನವಾಗಿ ಮಾಡಲಾಗುವ ಉದ್ದೇಶವನ್ನು ಹೊಂದಿತ್ತು. ಬಹುಶಃ ಅಂತಹದೊಂದು ಶಾಲಾ ನಕ್ಷೆ ತಯಾರಿಸುವಿಕೆಯ ಚೌಕಟ್ಟಿಗಾಗಿ ಹುಟುಕಾಟವು ಇಂದಿಗೂ ಸಹ ನಡೆಯುತ್ತಲೇ ಇದೆ. ಅದೇನೇ ಇದ್ದರೂ, ಸಾಮಾನ್ಯವಾಗಿ ಅಳವಡಿಸಿಕೊಳ್ಳಲಾಗುವ ಸ್ವರೂಪಕ್ಕಿಂತಲೂ ಗಮನಾರ್ಹವಾಗಿ ಭಿನ್ನವಾಗಿರುವ ಶಾಲಾ ನಕ್ಷೆ ತಯಾರಿಸುವಿಕೆಯ ವ್ಯಾಖ್ಯೆಯನ್ನು ನಿರ್ಧರಿಸುವ ಕೆಲವು ಪ್ರಮುಖ ಗುಣಲಕ್ಷಣಗಳನ್ನು ಲೋಕ್ ಜುಂಬಿಶ್ ಕಾರ್ಯಕ್ರಮದಲ್ಲಿ ನಾವು ಗುರುತಿಸಬಹುದಾಗಿದೆ. ವಾಸ್ತವದಲ್ಲಿ, ಕಾಲಾಂತರದಲ್ಲಿ ಲೋಕ್ ಜುಂಬಿಶ್ ಶಾಲಾ ನಕ್ಷೆ ತಯಾರಿಸುವಿಕೆ ಹಾಗೂ ಸೂಕ್ಷ್ಮ-ಆಯೋಜನೆಯ ಕೈಪಿಡಿಗಳ ಸರಣಿಯೊಂದನ್ನು ಹೊರತಂದಿದ್ದು, ಅದು ಈ ಕೆಲವು ತತ್ತ್ವಗಳನ್ನು ವಿಶದಪಡಿಸುವುದೇ ಅಲ್ಲದೆ, ಕ್ಷೇತ್ರಕಾರ್ಯಕರ್ತರಿಂದ ಜಾರಿಗೊಳಿಸಲಾಗುವ ಕೆಲವು ಮಾರ್ಗಸೂಚಿಗಳನ್ನು ಪ್ರಸ್ತುತಪಡಿಸುತ್ತದೆ.

**ಒಂದು ತಾಂತ್ರಿಕ ವಿಶ್ಲೇಷಣಾ ಪ್ರಾಯೋಗವಾಗಿ ಶಾಲಾ ನಕ್ಷೆ ತಯಾರಿಸುವಿಕೆ**

ಪ್ರಾಥಮಿಕ ಶಾಲೆಗೆ ಹೋಗುವ ಲಾಭವು ಎಲ್ಲಾ ಮಕ್ಕಳಿಗೂ ದೊರೆಯುವುದನ್ನು ಖಾತ್ರಿಪಡಿಸುವ ಸಲುವಾಗಿ ಒಂದು ವಿಶ್ಲೇಷಣೆ ಮಾಡುವುದು ನಾವು ಕೈಗೊಳ್ಳಬೇಕಿರುವ ಮೊದಲ ಕೆಲಸವಾಗಿದೆ. ಈ ಅರ್ಥದಲ್ಲಿ, ಶಾಲಾ ನಕ್ಷೆ ತಯಾರಿಸುವಿಕೆಯು ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶಲಭ್ಯತೆ ಹಾಗೂ ಪಾಲ್ಗೊಳ್ಳುವಿಕೆಯ ಪ್ರಮಾಣವನ್ನು ಸುಧಾರಿಸಲು ಬೇಕಾದ ಅವಶ್ಯಕತೆಗಳನ್ನು ವಿಶ್ಲೇಷಿಸುವ ಹಾಗೂ ಮೌಲ್ಯಮಾಪನ ಮಾಡುವ ಒಂದು ತಾಂತ್ರಿಕ ಪ್ರಾಯೋಗವಾಗಿದೆ. ಅಂತಹದೊಂದು ತಾಂತ್ರಿಕ ಕಾರ್ಯವು ಲೋಕ್ ಜುಂಬಿಶ್ ನ ಅಡಿಯಲ್ಲಿನ ಶಾಲಾ ನಕ್ಷೆ ತಯಾರಿಸುವಿಕೆಯ ಒಂದು ಪ್ರಮುಖ ಗುಣಲಕ್ಷಣವಾಗಿದೆ. ವಾಸ್ತವವಾಗಿ, ಶಾಲಾ ನಕ್ಷೆ ತಯಾರಿಸುವಿಕೆಯ ಸಾಂಪ್ರದಾಯಿಕ ಭಾರತೀಯ ವಿಧಾನದಲ್ಲೂ ಇದು ಹೀಗೇ ಇದೆ. ಆದಾಗ್ಯೂ, ಶಾಲಾ ನಕ್ಷೆ ತಯಾರಿಸುವಿಕೆಯ ಕಾರ್ಯವು ಸಾಮಾನ್ಯವಾಗಿ ಬಹಳ ದೊಡ್ಡದಾದ ಬ್ಲಾಕ್ ಅಥವಾ ಜಿಲ್ಲೆಗಳನ್ನು ಮೂಲಭೂತ ಘಟಕಗಳಾಗಿ ಒಳಗೊಳ್ಳುವ ಒಂದು ಸ್ಥಳ ಸಂಬಂಧಿ ಪ್ರಯತ್ನವಾಗಿದ್ದು ಅದು, ಸಾಮಾನ್ಯವಾಗಿ ಪರಿಸ್ಥಿತಿಯ ಕೂಲಂಕಷ ವಿಶ್ಲೇಷಣೆಗೆ ಹಾಗೂ ಭವಿಷ್ಯದ ಅಗತ್ಯಗಳನ್ನು ನಿರ್ಣಯಿಸುವುದಕ್ಕೆ ಅನುವು ಮಾಡಿಕೊಡಲು ಬಹಳ ದೊಡ್ಡ ಘಟಕಗಳಾಗಿರುತ್ತವೆ. ಈ ಪ್ರವೃತ್ತಿಗೆ ವ್ಯತಿರಿಕ್ತವಾಗಿ, ಲೋಕ್ ಜುಂಬಿಶ್‌ನಲ್ಲಿನ ಶಾಲಾ ನಕ್ಷೆ ತಯಾರಿಸುವಿಕೆಯು ಪ್ರತಿ ಗ್ರಾಮವನ್ನು ವಿಶ್ಲೇಷಣೆಯ ಒಂದು ಮೂಲಭೂತ ಘಟಕವಾಗಿ ಪರಿಗಣಿಸುತ್ತಾ ವಿಶ್ಲೇಷಣಾತ್ಮಕ ಮೌಲ್ಯಮಾಪನ ಮಾಡುವುದನ್ನು ಒಳಗೊಳ್ಳುತ್ತದೆ. ವಸ್ತುತಃ, ಗ್ರಾಮದಲ್ಲಿನ ಪ್ರತಿ ಕುಟುಂಬದಿಂದಲ್ಲೂ ಮಾಹಿತಿ ಸಂಗ್ರಹ ಮಾಡಲಾಗುತ್ತದೆ. ಆದ್ದರಿಂದ, ವಿಶ್ಲೇಷಣಾತ್ಮಕ ಸಮೀಕ್ಷೆಯು ಶಾಲೆಯೊಂದರ ಹೊಸ ಸ್ಥಳವನ್ನು ಪರಿಶೀಲಿಸುವುದಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಬದಲಿಗೆ, ಪ್ರತಿ

ಗ್ರಾಮದಲ್ಲಿನ ಶಾಲೆಗೆ ಹೋಗುವ ಎಲ್ಲಾ ಮಕ್ಕಳನ್ನು ಅವರ ಪಾಲ್ಗೊಳ್ಳುವಿಕೆಯ ಸ್ಥಾನಕ್ಕೆ ಸಂಬಂಧಿಸಿದಂತೆ ಗುರುತುಮಾಡುವುದರ ಮೇಲೆ ತನ್ನ ಗಮನ ಕೇಂದ್ರೀಕರಿಸುತ್ತದೆ. ಈ ವಿಶ್ಲೇಷಣೆಯು ಒಂದೆಡೆ ಶಾಲೆಗೆ ಹೋಗುವ ವಯಸ್ಸಿನ ಎಲ್ಲಾ ಮಕ್ಕಳನ್ನು ಗುರುತಿಸುವ ಹಾಗೂ ಅವರು ಶಾಲೆಗೆ ಹೋಗುತ್ತಿದ್ದಾರೆಯೇ ಎಂದು ಕಂಡುಕೊಳ್ಳುವ ಪ್ರಯತ್ನಗಳಾಗಿದ್ದರೆ, ಇನ್ನೊಂದೆಡೆ, ಕೆಲವು ಮಕ್ಕಳು ಶಾಲಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೇ ಇರುವುದಕ್ಕೆ ಇರುವ ನಿಖರ ಕಾರಣ ಅಥವಾ ಕಾರಣಗಳೇನು ಎಂಬುದನ್ನು ಕಂಡುಕೊಳ್ಳುವ ಪ್ರಯತ್ನಗಳಾಗಿವೆ. ಇದು ಅಗತ್ಯ ಬಿದ್ದಲ್ಲಿ ಪೂರೈಸುವಿಕೆಯ ಪರ್ಯಾಯ ವಿಧಾನಗಳ ಮೂಲಕ ಅವರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಲು ಅತ್ಯಗತ್ಯವೆಂದು ಪರಿಗಣಿಸಲಾಗಿದೆ.

**ದೃಶ್ಯಾತ್ಮಕ ದತ್ತಸಂಚಯವಾಗಿ ಶಾಲಾ ನಕ್ಷೆ ತಯಾರಿಸುವಿಕೆ**

ಯಾವುದೇ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನದ ಮುಖ್ಯ ಫಲಿತಾಂಶವೇನೆಂದರೆ ಅದು ನೆರೆಹೊರೆಯಲ್ಲಿ ಲಭ್ಯವಿರುವ ಪ್ರಾಥಮಿಕ ಶಿಕ್ಷಣ ಸೌಲಭ್ಯಗಳಿಗೆ ತುಲನಾತ್ಮಕವಾಗಿ ಇರುವ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಯ ಮೇಲಿನ ಮಾಹಿತಿ ಸಂಚಯವನ್ನು ಸೃಷ್ಟಿಸಿರುವುದಾಗಿದೆ. ಲೋಕ್ ಜುಂಬಿಶ್‌ನಲ್ಲಿ ಅಂತಹದೊಂದು ಮಾಹಿತಿ ಸಂಚಯವನ್ನು ಪ್ರತಿಯೊಂದು ಗ್ರಾಮಕ್ಕೂ ಸೃಷ್ಟಿಸಬೇಕಾಗುತ್ತದೆ. ಅಂತಹ ಗ್ರಾಮಸ್ತರದ ಮಾಹಿತಿ ವ್ಯವಸ್ಥೆಯನ್ನು ನೆಲೆಗೊಳಿಸುವ ಉದ್ದೇಶವಾದರೋ ಎಲ್ಲಾ ಮಕ್ಕಳನ್ನೂ ಪ್ರಾಥಮಿಕ ಶಿಕ್ಷಣದ ಪರಿಧಿಯೊಳಕ್ಕೆ ತರಲು ಅನುಗಾಮಿ ಕಾರ್ಯಗಳನ್ನು ಆಯೋಜಿಸಲು ಅದನ್ನು ಆಧಾರವಾಗಿ ಬಳಸಿಕೊಳ್ಳುವುದಾಗಿದೆ. ಈ ರೀತಿ ಕಲೆಹಾಕಿದ ಮಾಹಿತಿಯು ಸಾರ್ವತ್ರಿಕೀಕರಣದ ಗುರಿಯ ಸಾಧನೆಗೆ ಕೊಡಮಾಡಲು ಜನರನ್ನು ಪ್ರೇರೇಪಿಸುವಂತಹ ಸಾಮಾಜಿಕ ಕ್ರಿಯೆಗೆ ಒಂದು ಪರಿಣಾಮಕಾರಿ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ ಎಂಬುದಾಗಿ ಪರಿಕಲ್ಪಿಸಲಾಗಿದೆ. ಆದರೆ, ಈ ಫಲಿತಾಂಶವು ಸಂಖ್ಯೆಗಳು ಹಾಗೂ ಕೋಷ್ಟಕಗಳ ರೂಪದಲ್ಲಿದ್ದರೆ ಉದ್ದೇಶ ಈಡೇರಲು ಸಾಧ್ಯವೇ? ಓದಲು ಮತ್ತು ಬರೆಯಲು ತಿಳಿದಿರುವ ವಯಸ್ಕರ ಸಂಖ್ಯೆ ಅಲ್ಪಮಟ್ಟದಲ್ಲಿರುವ ಗ್ರಾಮೀಣ ರಾಜಸ್ಥಾನದ ಸಂದರ್ಭದಲ್ಲಿ ಈ ಪ್ರಶ್ನೆ ತಕ್ಕಮಟ್ಟಿಗೆ ಪ್ರಸ್ತುತವಾಗಿತ್ತು. ಇದನ್ನು ಗಮನದಲ್ಲಿರಿಸಿಕೊಂಡು, ಲೋಕ್ ಜುಂಬಿಶ್ ಪ್ರತಿ ಗ್ರಾಮಕ್ಕೂ ದೃಶ್ಯಾತ್ಮಕ ದತ್ತಸಂಚಯದ ರೂಪದಲ್ಲಿ ಒಂದು ಶಾಲಾ ನಕ್ಷೆಯನ್ನು ತಯಾರಿಸಿತು. ಶಾಲಾ ನಕ್ಷೆ ತಯಾರಿಸುವಿಕೆಯ ಕೈಪಿಡಿಯು ಗ್ರಾಮದ ನಕ್ಷೆಯನ್ನು ಬಿಡಿಸಲು ಮತ್ತು ವಿವಿಧ ಸಂಕೇತಗಳನ್ನು ಬಳಸುವುದರ ಮೂಲಕ ವಿಶ್ಲೇಷಣಾತ್ಮಕ ಸಮೀಕ್ಷೆಯ ಶೋಧಕಗಳನ್ನು ಪ್ರತಿನಿಧಿಸುವುದು ಹೇಗೆ ಎಂಬುದಕ್ಕೆ ವಿಸ್ತೃತ ಮಾರ್ಗಸೂಚಿಗಳನ್ನು ಸಾದರಪಡಿಸುತ್ತದೆ (ಅನುಬಂಧ ನೋಡಿ).

**ಒಂದು ಸಾಮಾಜಿಕ ಸಕ್ರಿಯಕರಣ ಪ್ರಕ್ರಿಯೆಯಾಗಿ ಶಾಲಾ ನಕ್ಷೆ ತಯಾರಿಸುವಿಕೆ**

ಸಾಂಪ್ರದಾಯಿಕ ವಿಧಾನದಲ್ಲಿ, ಮುಖ್ಯವಾಗಿ ಶಾಲಾ ನಕ್ಷೆ ತಯಾರಿಸುವಿಕೆಯ ಕಾರ್ಯವನ್ನು ಶಾಲೆಗೆ ಹೋಗುವ ವಯಸ್ಸಿನ ಮಕ್ಕಳ ಸಂಖ್ಯೆಯ ಮೇಲಿನ ಒಂದು ಅನುಭವಾತ್ಮಕ ಮಾಹಿತಿ ಮೂಲಾಧಾರವನ್ನು ಸೃಷ್ಟಿಸುವ ಒಂದು ವಿವೇಕಯುಕ್ತ ಸಾಧನವಾಗಿ, ತತ್ಪರಿಣಾಮವಾಗಿ ಅದು ಪ್ರಾಥಮಿಕ ಶಾಲಾ ಸೌಕರ್ಯಗಳ ಸ್ಥಳ ನಿರ್ಧಾರಣೆ ಮಾಡಲು ಮಾರ್ಗದರ್ಶನ ನೀಡುವಂತಾಗಬೇಕು ಎಂಬುದಾಗಿ ನೋಡಲಾಗಿದೆ. ಲೋಕ್ ಜುಂಬಿಶ್ ನಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಮೌಲ್ಯವನ್ನು ಅದರ ಫಲಿತಾಂಶವಾದ ಮಾಹಿತಿ ಮೂಲಾಧಾರದಲ್ಲಿ ಇರುವಷ್ಟೇ ಈ ಮಾಹಿತಿ ಮೂಲಾಧಾರವನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿಯೂ ಇದೆ ಎಂದು ಪರಿಗಣಿಸಲಾಗುತ್ತದೆ. ಶಾಲಾ ನಕ್ಷೆ ತಯಾರಿಸುವಿಕೆಯ ಮೂಲಕ ಸೃಷ್ಟಿಸಲ್ಪಟ್ಟ ಮಾಹಿತಿಯ ಆಧಾರದ ಮೇಲೆ

ಹೊಸ ಪ್ರಾಥಮಿಕ ಶಾಲೆಗಳ ಸ್ಥಳವನ್ನು ವಿವೇಕಯುಕ್ತವಾಗಿ ನಿರ್ಧರಿಸುವುದು ಲೋಕ್ ಜುಂಬಿಶ್‌ನ ಶಾಲಾ ನಕ್ಷೆ ತಯಾರಿಸುವಿಕೆಯ ಕಾಳಜಿಗಳಲ್ಲಿ ಒಂದಷ್ಟೆ. ಈಗಾಗಲೇ ಸೂಚಿಸಿರುವಂತೆ, ರಾಜಸ್ಥಾನದಲ್ಲಿ ಸಾರ್ವತ್ರಿಕೀಕರಣಕ್ಕೆ ಸಂಬಂಧಿಸಿದಂತೆ ಇರುವ ನಿಜವಾದ ಸಮಸ್ಯೆಯೆಂದರೆ ಅದು ಒದಗಣೆಗಳ ಪೂರೈಕೆ ಅಲ್ಲ, ಬದಲಿಗೆ ಕಡಮೆ ಪ್ರಮಾಣದ ದಾಖಲಾತಿ ಹಾಗೂ ಪಾಲ್ಗೊಳ್ಳುವಿಕೆ ಸೂಚಿಸುವಂತೆ, ಬಳಸದೇ ಇರದ ಸಾಮರ್ಥ್ಯಗಳಾಗಿವೆ. ಇದು ಕೆಲವು ಗ್ರಾಮಗಳಲ್ಲಿ ಹಲವು ದಶಕಗಳಿಂದ ಪ್ರಾಥಮಿಕ ಶಾಲೆಗಳಿದ್ದರೂ ಸಹ ಗ್ರಾಮದಲ್ಲಿ ಕೆಲವೇ ಕೆಲವು ಅಕ್ಷರಸ್ಥ ಪುರುಷರು ಹಾಗೂ ಮಹಿಳೆಯರನ್ನು ಕಾಣಬಹುದಾಗಿತ್ತು ಎಂಬ ಸಂಗತಿಯಿಂದ ಸ್ಪಷ್ಟವಾಗಿದೆ. ಪಾಲ್ಗೊಳ್ಳದಿರುವುದು ಹಾಗೂ ವ್ಯವಸ್ಥಿತ ಶಾಲಾಶಿಕ್ಷಣದ ಬಗ್ಗೆ ಉದಾಸೀನತೆ ತೋರುವುದು ಸಮುದಾಯದ ಸದಸ್ಯರಲ್ಲಿ ಒಂದು ದೀರ್ಘಕಾಲಿಕ ವಿದ್ಯಮಾನವಾಗಿಬಿಟ್ಟಿತ್ತು. ಈ ಹಿನ್ನೆಲೆಯಲ್ಲಿ ಲೋಕ್ ಜುಂಬಿಶ್ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಜನರಲ್ಲಿ ಪ್ರಾಥಮಿಕ ಶಿಕ್ಷಣದ ಮೌಲ್ಯದ ಕುರಿತು ಅರಿವು ಮೂಡಿಸಲು ಹಾಗೂ ಅವರ ಮಕ್ಕಳು ಪ್ರಾಥಮಿಕ ಶಿಕ್ಷಣದಲ್ಲಿ ಪಾಲ್ಗೊಳ್ಳುವುದನ್ನು ಖಾತ್ರಿಪಡಿಸಲು ಅವರನ್ನು ಪ್ರೇರೇಪಿಸುವಂತಹ ಒಂದು ಪರಿಣಾಮಕಾರಿ ಸಾಧನವನ್ನಾಗಿ ನೋಡುತ್ತದೆ. ಪ್ರಾಯೋಗಿಕವಾಗಿ ಹೇಳಬೇಕೆಂದರೆ, ಲೋಕ್ ಜುಂಬಿಶ್ ಸಾಮಾಜಿಕ ಸಕ್ರಿಯಕರಣದ ಪ್ರಕ್ರಿಯೆಯನ್ನು ರೂಪಿಸಲು ಸಹಭಾಗೀ ಗ್ರಾಮೀಣ ಪಾಲ್ಗೊಳ್ಳುವಿಕೆಯ ಮೌಲ್ಯನಿರ್ಣಯ (Participatory Rural Appraisal)[1] ಪ್ರಕ್ರಿಯೆಯ ವಿಧಿ ವಿಧಾನಕ್ಕೆ ಸದೃಶವಾದ ವಿಧಿ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ (Chambers (ಚೇಂಬರ್ಸ್), 1983;1993). ಪ್ರಕ್ರಿಯೆಯ ಆಯಾಮಕ್ಕೆ ಹಾಗೂ ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆಯನ್ನು ಉಂಟುಮಾಡುವ ಅಗತ್ಯಕ್ಕೆ ನೀಡಲಾಗುವ ಅತಿಯಾದ ಪ್ರಾಮುಖ್ಯತೆ ಲೋಕ್ ಜುಂಬಿಶ್ ನಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಎಲ್ಲಾ ಅಂಗಭೂತ ಕಾರ್ಯಗಳ ಗುಣಲಕ್ಷಣವಾಗಿದೆ.

**ಪ್ರಾಥಮಿಕ ಶಿಕ್ಷಣಕ್ಕೆ ಗ್ರಾಮಸ್ತರದ ಆಯೋಜನೆಯಾಗಿ ಶಾಲಾ ನಕ್ಷೆ ತಯಾರಿಸುವಿಕೆ**

ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ನಾಲ್ಕನೇ ಗುಣಲಕ್ಷಣವು ಹೆಚ್ಚು ವಿಶಾಲವಾದ ಕ್ರಿಯೆಯ ಚೌಕಟ್ಟಿನಿಂದ ಹೊಮ್ಮುವಂತದ್ದಾಗಿದ್ದು, ಅದು ಅಗತ್ಯಗಳ ಪಾಲ್ಗೊಳ್ಳುವಿಕೆಯ ಮೌಲ್ಯನಿರ್ಣಯವನ್ನಷ್ಟೇ ಅಲ್ಲದೆ, ತದನಂತರದ ಕಾರ್ಯ ಯೋಜನೆಗಳ ಸಿದ್ಧತೆಯನ್ನು ಕೂಡ ಒಳಗೊಳ್ಳುತ್ತದೆ. ಗ್ರಾಮಸ್ಥರು ಸಮಾಲೋಚನೆ ಹಾಗೂ ಒಮ್ಮತ ಸೃಷ್ಟಿಸುವ ಒಂದು ವ್ಯಾಪಕ ಪ್ರಕ್ರಿಯೆಯ ಮೂಲಕ ಸ್ವತಃ ತಾವೇ ಪಾಲ್ಗೊಳ್ಳುವಿಕೆಯ ಪ್ರಯತ್ನದ ಭಾಗವಾಗಿ ಇದನ್ನೇ ಮತ್ತೆ ಮಾಡುತ್ತಾರೆ. ಹೀಗೆ, ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಅವರ ಬೇಡಿಕೆಗಳ ಅಭಿವ್ಯಕ್ತಿಗೆ ಸ್ವತಃ ಜನರನ್ನೇ ಅವಲಂಬಿಸುವುದು ಅದರ ಸಾರಭೂತ ತತ್ತ್ವವಾಗಿದೆ. ಶಾಲಾ ನಕ್ಷೆ ತಯಾರಿಸುವಿಕೆಯ ಕೈಪಿಡಿಯು ಹೇಳುವಂತೆ:

> "...ಗ್ರಾಮ ಸಮುದಾಯವು ಗ್ರಾಮದಲ್ಲಿನ ಶೈಕ್ಷಣಿಕ ವ್ಯವಸ್ಥೆಯ ಮರುಪರಿಶೀಲನೆ ಮಾಡಲು ಸಾಧ್ಯವಾಗಬೇಕು ಮತ್ತು ಆಯೋಜನೆಯ ಎಲ್ಲಾ ಹೊಣೆಗಾರಿಕೆಯನ್ನು ವಹಿಸುವುದು ಮಾತ್ರವಲ್ಲದೆ ಅದರ ಸುಧಾರಣೆಗೂ ಸಹ ಜವಾಬ್ದಾರಿಯನ್ನು ವಹಿಸಬೇಕು. ಎಲ್ಲಾ ಶೈಕ್ಷಣಿಕ ಅಗತ್ಯಗಳ ಮೌಲ್ಯನಿರ್ಣಯ ಹಾಗೂ ಅದರ ಆಧಾರದ ಮೇಲೆ ನಿರ್ಧಾರ ತೆಗೆದುಕೊಳ್ಳುವುದೆಲ್ಲವೂ ಗ್ರಾಮಸ್ತರದಲೇ ಆಗಬೇಕಿದೆ. ನಿರ್ಧಾರ ತೆಗೆದುಕೊಳ್ಳುವ ಘಟಕವು ಸಾಧ್ಯವಾದಷ್ಟು ಗ್ರಾಮಸ್ತರಕ್ಕೆ ಹತ್ತಿರವಿರಬೇಕು ಹಾಗೂ ಅದರೆಲ್ಲಾ ಪ್ರಸ್ತಾವಗಳನ್ನು

ಗ್ರಾಮದಿಂದ ದೊರೆಯುವುದರ ಆಧಾರದ ಮೇಲೆ ಮಂಡಿಸಬೇಕು." (ಲೋಕ್ ಜುಂಬಿಶ್, 1996, ಪು. 9)

ಈ ಮೂಲಭೂತ ತತ್ತ್ವವು ಶಾಲೆಯ ಭೌಗೋಳಿಕ ಸ್ಥಳ, ಅದರ ಸಂರಕ್ಷಣೆ ಮತ್ತು ಉನ್ನತೀಕರಣ, ಅದರ ಸಿಬ್ಬಂದಿ ಪೂರೈಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಶಿಕ್ಷಣ ಇಲಾಖೆಯು ಜಿಲ್ಲಾ ಶಿಕ್ಷಣಾಧಿಕಾರಿಯ ಶಿಫಾರಸ್ಸಿನ ಆಧಾರದ ಮೇಲೆ ತೆಗೆದುಕೊಳ್ಳುವಂತಹ ಸಾಮಾನ್ಯವಾಗಿ ರೂಢಿಯಲ್ಲಿರುವ ಕಾರ್ಯ ತಂತ್ರಕ್ಕೆ ಪ್ರತಿಕ್ರಿಯೆಯಾಗಿ ಹಾಗೂ ಸರಿಪಡಿಸುವ ಕ್ರಮವಾಗಿ ಹೊರಹೊಮ್ಮಿತು. ಆದಾಗ್ಯೂ, ಇದು ಸಮಾಜದ ಎಲ್ಲಾ ವರ್ಗಗಳಿಗೂ ಪ್ರಾಥಮಿಕ ಶಿಕ್ಷಣ ಲಭ್ಯತೆಗೆ ಸಮಾನ ಅವಕಾಶವನ್ನು ಒದಗಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿ ಆಗಿಲ್ಲ. ಶಾಲೆಯು ಗ್ರಾಮದಲ್ಲಿ ಅಥವಾ ಅದರ ನೆರೆಹೊರೆಯಲ್ಲಿ ಹಲವು ವರ್ಷಗಳಿಂದ ಇದ್ದರೂ, ದಾಖಲಾತಿ ಪ್ರಮಾಣವೂ, ಗ್ರಾಮದ ಜನಸಮುದಾಯದ ಸಾಕ್ಷರತೆಯ ಮಟ್ಟವೂ ಕಡಮೆಯಾಗಿಯೇ ಉಳಿದಿದೆ. ಶಾಲೆಯು ಸಮುದಾಯದ ಹೊರಗೇ ಇರುತ್ತದೆ; ನಿರ್ಧಾರಗಳನ್ನು ಬೇರೆಲ್ಲೋ ತೆಗೆದುಕೊಳ್ಳಲಾಗುತ್ತದೆ; ಸಾಮಾನ್ಯವಾಗಿ ಶಿಕ್ಷಕರ ವಸತಿ ಸಮುದಾಯದ ಹೊರಗೆ ಇರುತ್ತದೆ; ಇವೆಲ್ಲದರ ಪರಿಣಾಮ, ಒಡೆತನದ ನಿಜವಾದ ಭಾವ ಅವರಲ್ಲಿ ಇರುವುದಿಲ್ಲ. ಈ ದೃಷ್ಟಿಕೋನದಿಂದ ನೋಡಿದರೆ, ಸಮುದಾಯದ ಸದಸ್ಯರಲ್ಲಿ ಒಡೆತನದ ಭಾವನೆಯು ಮೂಡುವಂತಾಗಲು ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಸ್ವತಃ ಗ್ರಾಮಸ್ಥರ ಕೈಯಲ್ಲಿ ಮುಂದಾಳತ್ವ ಹಾಗೂ ನಿಯಂತ್ರಣವನ್ನು ಇರಿಸುವ ಸಾಧನವೆಂಬಂತೆ ಪರಿಗಣಿಸಲಾಗುತ್ತದೆ.

## ಶಾಲಾ ನಕ್ಷೆ ತಯಾರಿಸುವಿಕೆ ಚೌಕಟ್ಟಿನ ವಿಕಾಸ: ಒಂದು ಪುನರ್ರಚನೆ

ಹಿಂದಿನ ಪ್ಯಾರಾಗಳಲ್ಲಿ ನೀಡಲಾದ ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಚಿತ್ರಣವನ್ನು, ಕೈಗೊಂಡಂತಹ ಕೇವಲ ಒಂದು ಸೈದ್ಧಾಂತಿಕ ಪ್ರಕ್ರಿಯೆ ಹಾಗೂ ಕ್ಷೇತ್ರಕಾರ್ಯಕರ್ತರ ಮತ್ತು ಗ್ರಾಮಸ್ಥರ ಮೇಲೆ ಅನುಸರಿಸುವಂತೆ ಹೇರಲಾದದ್ದು ಎಂಬುದಾಗಿ ವ್ಯಾಖ್ಯಾನಿಸಬಾರದು. ಸ್ವತಃ ಅದರ ಪರಿಕಲ್ಪನಾತ್ಮಕ ಹಾಗೂ ಕಾರ್ಯಾಚರಣೆಯ ಗುಣಲಕ್ಷಣಗಳು ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಯಲ್ಲಿ ನೇರವಾಗಿ ತೊಡಗಿರುವವರನ್ನು ಒಳಗೊಂಡ, ವಿಸ್ತೃತ ಪ್ರಯೋಗ ಪರೀಕ್ಷೆಗಳು, ಪ್ರಾಯೋಗಿಕ ವಿಶ್ಲೇಷಣೆ ಹಾಗೂ ಚರ್ಚೆಗಳ ಮೂಲಕ ಒಂದು ಸುದೀರ್ಘ ಕಾಲಾವಧಿಯಲ್ಲಿ ವಿಕಾಸಗೊಂಡದ್ದಾಗಿವೆ. ಶಾಲಾ ನಕ್ಷೆ ತಯಾರಿಸುವಿಕೆ ಕೈಪಿಡಿಯು, ಹಲವು ವರ್ಷಗಳ ಹಿಂದೆ ಮೊದಲು ಸಂಕಲನಗೊಂಡಾಗಿನಿಂದ ಕಂಡಿರುವ ಐದು ಕ್ರಮಾನುಗತ ಪರಿಷ್ಕರಣಗಳಿಂದ ಇದು ಸಾಕಷ್ಟು ಸ್ಪಷ್ಟವಾಗುತ್ತದೆ. ಒಂದೆಡೆ, ಕೈಪಿಡಿಯ ವಿಭಿನ್ನ ಆವೃತ್ತಿಗಳು, ಕ್ಷೇತ್ರದಿಂದ ಪಡೆಯಲಾದ ಪ್ರತಿಕ್ರಿಯೆಗಳ ಆಧಾರದ ಮೇಲೆ ಪಾಲ್ಗೊಳ್ಳುವಿಕೆ ಹಾಗೂ ಅಳವಡಿಸಿಕೊಳ್ಳುವಿಕೆಯ ಹುಮ್ಮಸ್ಸನ್ನು ಸೆರೆಹಿಡಿದರೆ, ಮತ್ತೊಂದೆಡೆ ಕೈಪಿಡಿಯ ಪ್ರಸ್ತುತ ಆವೃತ್ತಿಯ ಹುಟ್ಟನ್ನು ಪ್ರಭಾವಿಸಿದ ದಾಖಲೆಗಳ ರೂಪದಲ್ಲಿರುವಂತಹ ಪರ್ಯಾಲೋಚನೆಗಳು ಹಾಗೂ ಪ್ರಾಯೋಗಿಕ ಶೋಧನೆಗಳು ಸಾಂಸ್ಥಿಕ ಸ್ಮೃತಿಯನ್ನು ಉಳಿಸಿಕೊಳ್ಳಲು ನೆರವಾಗುತ್ತವೆ. ಲೇಖನದ ಮುಂದಿನ ಭಾಗದಲ್ಲಿ ಲೋಕ್ ಜುಂಬಿಶ್ ನ ಅದರ ಪರಿಕಲ್ಪನೆಯಿಂದ ಹಿಡಿದು ಇಂದಿನ ಚೌಕಟ್ಟಿನವರೆಗಿನ ನಡೆದು ಬಂದ ಹಾದಿಯ ಅದರ ಪಯಣವನ್ನು ನೆನೆಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ಪುನರ್ರಚನೆಯು ಪ್ರಧಾನವಾಗಿ ಲೋಕ್ ಜುಂಬಿಶ್‌ನಲ್ಲಿ ಅಡವಳಿಸಿಕೊಂಡಿರುವ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಸಕ್ತ ಪರಿಕಲ್ಪನೆ ಹಾಗೂ ಕಾರ್ಯ ರೀತಿಗೆ ಎಡೆಮಾಡಿಕೊಟ್ಟ ವಿವಿಧ ಘಟನೆಗಳನ್ನು ವಿವರಪೂರ್ಣವಾಗಿ ಹೇಳಿದ

ಸಂಸ್ಥೆಯ ಸದಸ್ಯರ ಆಖ್ಯಾನವನ್ನು (ವ್ಯಕ್ತಿಗತ ಸಂದರ್ಶನಗಳಲ್ಲಿ ಹಾಗೂ ಲಿಖಿತ ಮಾಹಿತಿಯ ಮೂಲಕ) ಆಧರಿಸಿದೆ.

**ಕೆಲವು ಪೂರ್ವಘಟನೆಗಳು**

ಲೋಕ್ ಜುಂಬಿಶ್ ಅನ್ನು ಕಳೆದ ದಶಕದ ಕೊನೆಯಲ್ಲಿ ಪರಿಕಲ್ಪಿಸಿದಾಗ ದೇಶದಲ್ಲಿನ ಹಲವು ಬೆಳವಣಿಗೆಗಳು ಅದರ ಉದ್ದೇಶಗಳು ಹಾಗೂ ಘಟಕದ ಕಾರ್ಯತಂತ್ರಗಳನ್ನು ರೂಪಿಸುವುದಕ್ಕೆ ಹಿನ್ನೆಲೆಯಾಗಿ ಕಾರ್ಯನಿರ್ವಹಿಸಿದವು. ದಾಖಲಾತಿ ಸಂಖ್ಯೆಗಳಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿದೆಯಾದರೂ, ಶಾಲೆಯಿಂದ ಹೊರಗೆ ಉಳಿದ ಮಕ್ಕಳ ಸಂಖ್ಯೆಯು ಅತಿ ಹೆಚ್ಚಾಗಿಯೇ ಉಳಿದಿದ್ದು ಅದು ರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಕಳವಳ ಹುಟ್ಟಿಸುವ ಗಂಭೀರ ವಿಷಯವಾಗಿತ್ತು. ಇದು ರಾಜಸ್ಥಾನವೂ ಸೇರಿದಂತೆ, ವಿಶೇಷವಾಗಿ ಕೆಲವು ರಾಜ್ಯಗಳಿಗೆ ಸಂಬಂಧಿಸಿತ್ತು. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸಬೇಕಾದ ಅಗತ್ಯವನ್ನು ಗುರುತಿಸಿದ 1986ರ ರಾಷ್ಟ್ರೀಯ ಶಿಕ್ಷಣನೀತಿಯು ಎಲ್ಲಾ ಮಕ್ಕಳ ದಾಖಲಾತಿಯನ್ನು ಹಾಗೂ ಅವರು ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸುವುದನ್ನು ಖಾತ್ರಿಪಡಿಸಲು ಕರಾರುವಾಕ್ಕಾದ ಸೂಕ್ಷ್ಮ-ಆಯೋಜನೆಗೆ ಕರೆಕೊಟ್ಟಿತು.

ಸುಮಾರು ಇದೇ ಸಮಯದಲ್ಲಿ, ಕೇಂದ್ರ ಸರ್ಕಾರ ಕೂಡ ಅನೇಕ ತಂತ್ರಜ್ಞಾನ ನಿಯೋಗಗಳನ್ನು ಉಪಕ್ರಮಿಸಿತ್ತು. ಅವುಗಳಲ್ಲಿ ಒಂದೆಂದರೆ, 1987-88ರಲ್ಲಿ ಉಪಕ್ರಮಿಸಿದ ರಾಷ್ಟ್ರೀಯ ಸಾಕ್ಷರತಾ ನಿಯೋಗ (National Literacy Mission-NLM (ಎನ್ ಎಲ್ ಎಮ್)). ಮೊದಲ ಒಂದೆರಡು ವರ್ಷಗಳಲ್ಲಿ ರಾಷ್ಟ್ರೀಯ ಸಾಕ್ಷರತಾ ನಿಯೋಗದ ಒಂದು ಮುಖ್ಯ ಸಾಧನೆಯೆಂದರೆ ಅದು ಭಾರತ ಜ್ಞಾನ ವಿಜ್ಞಾನ ಸಮಿತಿ (Bharat Gnyan Vignana Samiti – BGVS (ಬಿಜಿವಿಎಸ್)) ಯ ಸಹಾಯದೊಂದಿಗೆ ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ವಾತಾವರಣವನ್ನು ಕಟ್ಟಿಕೊಡಲು ಕೈಗೊಂಡ ಬೃಹತ್ ಅಭಿಯಾನ. ಭಾರತ ಜ್ಞಾನ ವಿಜ್ಞಾನ ಸಮಿತಿಗೆ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ (Kerala Sastra Sahitya Parishad) ಹಾಗೂ ಜನ ವಿಜ್ಞಾನ ಆಂದೋಲನ (Peoples Science Movement)ದ ಅನುಭವಸ್ಥ ಕಾರ್ಯಕರ್ತರ ನೆರವು ಲಭ್ಯವಿದ್ದುದರಿಂದ, ಸ್ವತಃ ಜನರೇ ಒಳಗೊಳ್ಳುವಂತೆ ಮತ್ತು ಸಾಕ್ಷರತೆ ಹಾಗೂ ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆಯನ್ನು ಉಂಟುಮಾಡಲು ಅದೇ ಜನರನ್ನು ಸಕ್ರಿಯಕರಣಗೊಳ್ಳುವಂತೆ ಸಾಮೂಹಿಕ ಶಿಕ್ಷಣಕ್ಕೆ ತಂತ್ರಗಳನ್ನು ಮೂರ್ತೀಕರಿಸಲು ಸಾಧ್ಯವಾಯಿತು.

ಲೋಕ್ ಜುಂಬಿಶ್ ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ಹಿನ್ನೆಲೆಯ ಪ್ರಮುಖ ಅಂಶಗಳನ್ನು ಸಂಗ್ರಹಿಸಿ ಹೇಳುವಾಗ, 1983-84ರಲ್ಲಿ ರಾಜಸ್ಥಾನದಲ್ಲಿ ಗಳಿಸಿದ ಕೆಲವು ಉಪಯುಕ್ತ ಅನುಭವಗಳನ್ನು ಮೆಲಕುಹಾಕುವುದು ಸೂಕ್ತವಾದೀತು. ತಿಲೋನಿಯಾದ ಸಾಮಾಜಿಕ ಕಲ್ಯಾಣ ಹಾಗೂ ಸಂಶೋಧನಾ ಕೇಂದ್ರ (Social Welfare and Research Centre) ದ ಸಹೋದ್ಯೋಗಿಗಳ ಸಹಾಯದಿಂದ ರಾಜಸ್ಥಾನ ಸರ್ಕಾರವು ಆರೋಗ್ಯ ರಕ್ಷಣೆ, ಸಹಕಾರ ಸಂಘಗಳು, ಕುಡಿಯುವ ನೀರು, ಹಾಗೂ ಶಿಕ್ಷಣದಂತಹ ವಿಭಿನ್ನ ಸಾಮಾಜಿಕ ವಲಯಗಳಲ್ಲಿ ಪ್ರಚಲಿತ ಪೂರೈಸುವಿಕೆಯ ವ್ಯವಸ್ಥೆಯ ವಿಶ್ಲೇಷಣೆಗಾಗಿ ತರುಣರನ್ನು ಸಕ್ರಿಯಕರಣಗೊಳಿಸುವ ಪ್ರಯೋಗವನ್ನು ಕೈಗೊಂಡಿತ್ತು. ಈ ಪ್ರಯೋಗವು ಪೂರೈಕೆ ವ್ಯವಸ್ಥೆಯ ಬೃಹತ್ಪ್ರಮಾಣದ ಸಕ್ರಿಯಕರಣ ಅಥವಾ ಸುಧಾರಣೆ ಮಾಡುವಲ್ಲಿ ಯಶಸ್ಸು ಕಾಣದಿದ್ದರೂ, ಅದು ಗ್ರಾಮದ ಜನರನ್ನು ತರಬೇತುಗೊಳಿಸುವುದರ ಬಗ್ಗೆ ಹಾಗೂ ಗ್ರಾಮದ ತರುಣರನ್ನು ಚಾಲ್ತಿಯಲ್ಲಿದ್ದ ಪೂರೈಸುವಿಕೆಯ

ವ್ಯವಸ್ಥೆಯನ್ನು ವಿಶ್ಲೇಷಿಸಲು ಪ್ರಯತ್ನಿಸುವಂತೆ ಅವರಿಗೆ ಅನುವು ಮಾಡಿಕೊಡಬಹುದಾದಂತಹ ಕಾರ್ಯೋಪಯೋಗಿ ಕಾರ್ಯತಂತ್ರಗಳ ಬಗ್ಗೆ ತಿಳುವಳಿಕೆಯನ್ನು ಬೆಳಸಿಕೊಳ್ಳಲು ಕೆಲವು ಒಳನೋಟಗಳನ್ನಂತೂ ನೀಡಿತು.

ಈ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಬೆಳವಣಿಗೆಗಳಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಎರಡು ವಿಧದ ಅನುಭವಗಳು ಲಭ್ಯವಿದ್ದವು. ಒಂದು, ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ವಿವೇಕಯುಕ್ತ ರೀತಿಯಲ್ಲಿ ವಿಸ್ತರಿಸುವ ಅವರ ಪ್ರಯತ್ನಕ್ಕೆ ನೆರವಾಗಲೆಂದು ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳನ್ನು ರೂಪಿಸುವಲ್ಲಿ ಹಾಗೂ ಪ್ರಯೋಗ ಮಾಡುವಲ್ಲಿ ಅಂತಾರಾಷ್ಟ್ರೀಯ ಶೈಕ್ಷಣಿಕ ಯೋಜನಾ ಸಂಸ್ಥೆಯ ಅನುಭವದ್ದಾಗಿತ್ತು. ಮತ್ತೊಂದು ಸಂಬಂಧಿತ ಅನುಭವವೆಂದರೆ ಅದು ಕಾಲಾಂತರದಲ್ಲಿ, ಸಮುದಾಯವು ತನ್ನ ಸ್ವತ್ತು, ಸಮಸ್ಯೆ ಹಾಗೂ ಅಗತ್ಯಗಳನ್ನು ಮೌಲ್ಯನಿರ್ಣಯ ಮಾಡಲು ಅನುವು ಮಾಡಿಕೊಡುವ ಸಮುದಾಯ ಒಳಗೊಳ್ಳುವಿಕೆಯ ಕಾರ್ಯತಂತ್ರವಾಗಿ ಸ್ವೀಕಾರಾರ್ಹತೆಯನ್ನು ಗಳಿಸಿದ್ದ ಸಹಭಾಗೀ ಗ್ರಾಮೀಣ ಮೌಲ್ಯನಿರ್ಣಯದ್ದಾಗಿತ್ತು. ಈ ವಿಧಾನವನ್ನು ಹಲವು ಅಭಿವೃದ್ಧಿಶೀಲ ದೇಶಗಳಲ್ಲಿ ಬಳಸಲಾಗಿತ್ತು; ಮತ್ತು ಭಾರತದಲ್ಲಿ, ಈ ಕಾರ್ಯತಂತ್ರವನ್ನು ಸಮುದಾಯ ಒಳಗೊಳ್ಳುವಿಕೆಯೊಂದಿಗೆ ಯೋಜಿಸಲು ಮೂಲ ವಿಧಾನವಾಗಿ ಪರಿಗಣಿಸಲಾಗಿತ್ತು. ಇದರ ಜೊತೆಗೆ, ಫಲಾನುಭವಿ ಗುಂಪುಗಳಿಗೆ ನೇರವಾಗಿ ಹಾಗೂ ಫಲಕಾರಿಯಾಗಿ ಮಾಹಿತಿಯನ್ನು ತಲುಪಿಸಲು ಸ್ಥೂಲ-ಆಯೋಜನೆಯ ಕಾರ್ಯತಂತ್ರಗಳ ಬದಲು ಸೂಕ್ಷ್ಮ-ಆಯೋಜನೆಯ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವ ಪ್ರವೃತ್ತಿಯು ಹೆಚ್ಚುತ್ತಿತ್ತು. ಭಾರತದಲ್ಲಿನ ಈ ಬೆಳವಣಿಗೆಗಳು 'ಬುಡಕಟ್ಟು ಉಪ-ಆಯೋಜನಾ ವಿಧಾನದಲ್ಲಿ'[2] ಹಾಗೂ ಫಲಾನುಭವಿಗಳನ್ನು ಗುರಿಯಾಗಿಸಿ ಯೋಜನಾ ಆಯೋಗವು ಪರಿಚಯಿಸಿದ ಅನೇಕಾನೇಕ ಯೋಜನೆಗಳ ರೂಪದಲ್ಲಿ ವ್ಯಕ್ತಗೊಂಡಿದ್ದವು.

**ಅದು ಆರಂಭವಾದದ್ದು ಹೇಗೆ?**

1989-91 ರಲ್ಲಿ ಲೋಕ್ ಜುಂಬಿಶ್‌ನ ಮೊದಲ ದಾಖಲೆಗಳನ್ನು ಸಿದ್ಧಪಡಿಸಿದಾಗ ಶಾಲಾ ನಕ್ಷೆ ತಯಾರಿಸುವಿಕೆ ಹಾಗೂ ಸೂಕ್ಷ್ಮ-ಆಯೋಜನೆ ಯಾವ ಸ್ವರೂಪ ಪಡೆಯಬೇಕು ಎಂಬುದು ಸ್ಪಷ್ಟವಿರಲಿಲ್ಲ. ಆದಾಗ್ಯೂ, ಕೆಲವು ಮೂಲಭೂತ ವಿಚಾರಗಳ ಕುರಿತು ಸಾಕಷ್ಟು ಸ್ಪಷ್ಟತೆಯಿತ್ತು: ಜನರ ಪಾಲ್ಗೊಳ್ಳುವಿಕೆಯೊಂದಿಗೆ ಸ್ಥಳೀಯ ಸ್ತರದ ಶೈಕ್ಷಣಿಕ ಆಯೋಜನೆಯನ್ನು ಕೈಗೊಳ್ಳಬೇಕು; ವಾತಾವರಣ ಸೃಷ್ಟಿಸಲು, ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಬೇಡಿಕೆಯನ್ನು ಉಂಟುಮಾಡಲು ವ್ಯವಸ್ಥಿತ ಕ್ರಮಗಳನ್ನು ತೆಗೆದುಕೊಳ್ಳಬೇಕು; ಶಾಲೆಗಳನ್ನು ತೆರೆಯುವ ವಿಷಯಕ್ಕೆ ಅಥವಾ ಇತರ ಸೌಕರ್ಯಗಳಿಗೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ವಿಕೇಂದ್ರೀಕರಿಸಬೇಕು; ಹಾಗೂ, ಮಕ್ಕಳ ದಾಖಲಾತಿ ಮತ್ತು ಅವರನ್ನು ಅದೇ ತರಗತಿಯಲ್ಲಿ ಉಳಿಸಿಕೊಳ್ಳುವ ವಿಷಯವಾಗಿ ಯೋಜನೆಗಳನ್ನು ಕೈಗೊಳ್ಳಲು ಪೋಷಕರು ಹಾಗೂ ಮಕ್ಕಳನ್ನು ಒಳಗೊಳ್ಳುವಂತಹ ಒಂದು ಸೂಕ್ತ ಕಾರ್ಯತಂತ್ರವನ್ನು ರೂಪಿಸಬೇಕು ಎಂಬಂತಹ ವಿಚಾರಗಳು.

ಲೋಕ್ ಜುಂಬಿಶ್ ತನ್ನ ಕಾರ್ಯಾಚರಣೆಯನ್ನು 1992ರ ಜುಲೈ ತಿಂಗಳಲ್ಲಿ ಪ್ರಾರಂಭಿಸಿತು. ಮೊದಲ ಮರುಪರಿಶೀಲನೆ ಹಾಗೂ ಆಯೋಜನಾ ಸಭೆ (review and planning meeting – RPM (ಆರ್ ಪಿ ಎಮ್)) ಯು ಅದೇ ತಿಂಗಳಲ್ಲಿ ನಡೆಯಿತು ಹಾಗೂ ಕಾರ್ಯಸೂಚಿ ವಿಷಯಗಳ ಪೈಕಿ ಶಾಲಾ ನಕ್ಷೆ

ತಯಾರಿಸುವಿಕೆಯು ಒಂದಾಗಿತ್ತು. ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಯನ್ನು ರೂಪಿಸಲು, ಲೋಕ್ ಜುಂಬಿಶ್ ಕಾರ್ಯಕ್ರಮವನ್ನು ಜಾರಿಮಾಡಲು ಆಯ್ಕೆಮಾಡಲಾದ ಮೊದಲ ಐದು ಬ್ಲಾಕ್ ಗಳಾದ ಪಿಸಾಂಗನ್, ಅರೈನ್, ಲುನ್ಕರ್ನ್‌ಸರ್, ಗರ್ಹಿ ಹಾಗೂ ಕಿಶನ್ ಗಂಜ್ ಗೆ ಭೇಟಿ ನೀಡುವುದು ಎಂದು ನಿರ್ಧರಿಸಲಾಯಿತು. ಶಾಲಾ ನಕ್ಷೆ ತಯಾರಿಸುವಿಕೆಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯಕರ್ತರು ಹಾಗೂ ಗ್ರಾಮ ಸಂಪರ್ಕ ತಂಡಗಳನ್ನು ಸ್ಥಾಪಿಸಲು ಪ್ರಾರಂಭಿಸಿದ್ದವರೊಂದಿಗೆ ಸಮಾಲೋಚನೆ ಮಾಡಲಾಯಿತು. ಈ ಶಾಲಾ ನಕ್ಷೆ ತಯಾರಿಸುವಿಕೆ ಕೆಲಸವನ್ನು ಪ್ರಾರಂಭಿಸಲು ಪುಟ್ಟ ದಾಖಲೆಯೊಂದನ್ನು ತಯಾರಿಸಲಾಯಿತು. ಈ ದಾಖಲೆಯು ಮುಖ್ಯವಾಗಿ ಒಂದೆರಡು ದಿನಗಳ ಮಟ್ಟಿನ ಅಲ್ಪಕಾಲಿಕ ತರಬೇತಿಯನ್ನು ನೀಡಲಾಗುವಂತಹ ಗ್ರಾಮಸ್ಥರ 'ಮುಖ್ಯ ತಂಡ' ದ ಮೂಲಕ ಗ್ರಾಮದ ನಕ್ಷೆಯನ್ನು ಸಿದ್ಧಗೊಳಿಸುವ ಪ್ರಕ್ರಿಯೆಗೆ ಸಂಬಂಧಿಸಿದ್ದಾಗಿತ್ತು. ಕುಟುಂಬ ಸಮೀಕ್ಷೆಯನ್ನು ಕೈಗೊಳ್ಳಲು ಒಂದು ಪ್ರಾಥಮಿಕ ಸಮೀಕ್ಷಾ ನಮೂನೆಯನ್ನೂ ಸಹ ರೂಪಿಸಲಾಗಿದ್ದು, ಅದು ರಾಷ್ಟ್ರೀಯ ಶೈಕ್ಷಣಿಕ ಆಯೋಜನೆ ಹಾಗೂ ಆಡಳಿತ ಸಂಸ್ಥೆ (National Institute of Educational Planning and Administration – NIEPA (ಎನ್‌ಐಇಪಿಎ)) ಯು ಆಯೋಜಿಸಿದ ಶಾಲಾ ನಕ್ಷೆ ತಯಾರಿಸುವಿಕೆ ಮೇಲಿನ  ವಿಚಾರ ಗೋಷ್ಠಿಯಲ್ಲಿ ರೂಪಿಸಲಾದ ನಮೂನೆಗಳ ಮೇಲೆ ಆಧಾರಿತವಾಗಿತ್ತು.

ಈ ಪ್ರಾಥಮಿಕ ಶಾಲಾ ನಕ್ಷೆ ತಯಾರಿಸುವಿಕೆ ದಾಖಲೆಯನ್ನು 1992ರ ಸೆಪ್ಟೆಂಬರಿನಲ್ಲಿ ನಡೆದ ಎರಡನೇ ಮರುಪರಿಶೀಲನೆ ಹಾಗೂ ಯೋಜನಾ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಆಗಿನ ದಿನಗಳಲ್ಲಿ, ಎಲ್ಲಾ ಕ್ಷೇತ್ರಕಾರ್ಯಕರ್ತರನ್ನೂ ಈ ಸಭೆಗಳಿಗೆ ಆಹ್ವಾನಿಸಲಾಗುತ್ತಿತ್ತು - ಅವರ ಸಂಖ್ಯೆ 10 ಅಥವಾ 12ಕ್ಕಿಂತ ಹೆಚ್ಚಿರಲಿಲ್ಲ. ಇತರ ಆಹ್ವಾನಿತರು NIEPA ದ ಓರ್ವ ಸಂಪನ್ಮೂಲ ವ್ಯಕ್ತಿ ಹಾಗೂ ಸರ್ಕಾರೇತರ ಸಂಸ್ಥೆಗಳು ಮತ್ತು ಸಂಶೋಧನಾ ಸಂಸ್ಥೆಗಳಿಂದ ಆಯ್ಕೆಮಾಡಿದ ವ್ಯಕ್ತಿಗಳಾಗಿರುತ್ತಿದ್ದರು. ಮೊದಲ ಶಾಲಾ ನಕ್ಷೆ ತಯಾರಿಸುವಿಕೆಯ ದಾಖಲೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದ ಬಳಿಕ ಐದು ಬ್ಲಾಕ್ ಗಳಿಂದ ಬಂದ ಪ್ರತಿ ಕ್ಷೇತ್ರಕಾರ್ಯಕರ್ತರೂ ಒಂದು ಅಥವಾ ಎರಡು ಗ್ರಾಮಗಳಲ್ಲಿ ಕೆಲಸ ಪ್ರಾರಂಭಿಸಲು ಒಪ್ಪಿಕೊಂಡರು.

ಇನ್ನೂ ಹೆಚ್ಚಿನ ವಿವರಗಳನ್ನು ಆಲೋಚಿಸಿ ರೂಪಿಸಲು, ಲೋಕ್ ಜುಂಬಿಶ್‌ನ ಕ್ಷೇತ್ರಕಾರ್ಯಕರ್ತರ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಜೈಪೂರ್ ನಲ್ಲಿ 1992ರ ಅಕ್ಟೋಬರ್ ತಿಂಗಳಲ್ಲಿ ಆಯೋಜಿಸಲಾಯಿತು. ಗ್ರಾಮ ನಕ್ಷೆಯ ತಯಾರಿಸುವಿಕೆಯಲ್ಲಿ ಬಳಸಬಹುದಾದ ಕೆಲವು ಸಾಮಾನ್ಯ ಸಂಕೇತಗಳನ್ನು ವಿವರವಾಗಿ ಚರ್ಚಿಸಲಾಯಿತು ಹಾಗೂ ಸಮೀಕ್ಷಾ ನಮೂನೆಗಳನ್ನು ಮತ್ತೊಮ್ಮೆ ಪರಿಶೀಲಿಸಲಾಯಿತು. 'ಮುಖ್ಯ ತಂಡ' ವನ್ನು ರಚಿಸಬೇಕಾದ ರೀತಿ ಮತ್ತು ಅದಕ್ಕೆಂದು ಆಯೋಜಿಸಬೇಕಾದ ತರಬೇತಿಗೂ ಗಮನ ಕೊಡಲಾಯಿತು. ಒಂದು ಗ್ರಾಮದಲ್ಲಿ ಪ್ರಯೋಗ ಪರೀಕ್ಷೆ ಮಾಡಿದ ಬಳಿಕ ಜನವರಿ, 1993ರಲ್ಲಿ ಮತ್ತೊಂದು ಕಾರ್ಯಾಗಾರವನ್ನು ಆಯೋಜಿಸಲು ನಿರ್ಧರಿಸಲಾಯಿತು. ಈ ಕಾರ್ಯಾಗಾರದಲ್ಲಿ, ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅಧ್ಯಾಯಗಳನ್ನು ಒಳಗೊಂಡಿದ್ದ ಸಣ್ಣ ಹೊತ್ತಿಗೆಯೊಂದನ್ನು ಸಿದ್ಧಪಡಿಸಲಾಯಿತು:

1. ಮುಖ್ಯ ತಂಡ ಹಾಗೂ ಅದರ ತರಬೇತಿ;
2. ಕುಟುಂಬ ಸಮೀಕ್ಷೆ;
3. ಗ್ರಾಮದ ಹಾಗೂ ಬಳಸಬೇಕಾದ ಸಂಕೇತಗಳ ಒಂದು ಸ್ಥೂಲ ನಕ್ಷೆ ತಯಾರಿಸುವಿಕೆ;

4. ಗ್ರಾಮ ಸಮುದಾಯದೊಂದಿಗೆ ಹಂಚಿಕೊಳ್ಳುವುದು;
5. ಶಾಲೆ ಹಾಗೂ ಶಿಕ್ಷಕರಿಗೆ ಪ್ರಸ್ತಾವಗಳ ತಯಾರಿ.

**ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಗಳ ಮರುಪರಿಶೀಲನೆ ಹಾಗೂ ಪರಿಷ್ಕರಣೆ**

ಈ ದಾಖಲೆಯ ಆಧಾರದ ಮೇಲೆ ಶಾಲಾ ನಕ್ಷೆ ತಯಾರಿಸುವಿಕೆಯ ಕಾರ್ಯವನ್ನು ಪ್ರಾರಂಭಿಸಲಾಗಿತ್ತಾದರೂ, ಈ ಗ್ರಾಮಗಳಲ್ಲಿ ಹೆಚ್ಚುವರಿ ಶಾಲಾಶಿಕ್ಷಣ ಸೌಕರ್ಯಗಳನ್ನು ಒದಗಿಸಲು ಆಧರಿಸಬಹುದಾದಂತಹ ಮಾನದಂಡಗಳನ್ನು ರೂಪಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು. ಆಗ ಚಾಲ್ತಿಯಲ್ಲಿದ್ದ ರಾಜಸ್ಥಾನ ಸರ್ಕಾರದ ಮಾನದಂಡಗಳು, 'ಕಾರ್ಯಾಚರಣೆ ಕಪ್ಪುಹಲಗೆ' ಅಡಿಯಲ್ಲಿ ವಿಧಿಸಲಾದ ಮಾನದಂಡಗಳು, ಶಿಕ್ಷಾ ಕರ್ಮಿ ಯೋಜನೆಯ ಅಡಿಯಲ್ಲಿ ಅಳವಡಿಸಿಕೊಂಡಿದ್ದ ಮಾನದಂಡಗಳು ಹಾಗೂ ಇತರ ಸಂಬಂಧಿತ ಮಾಹಿತಿಯನ್ನು ಈ ಕಾರ್ಯದಲ್ಲಿ ಪರಿಗಣಿಸಲಾಯಿತು. ಹೆಚ್ಚು ಕಡಮೆ ಲೋಕ್ ಜುಂಬಿಶ್‌ನ ಮಾನದಂಡಗಳು, ಅಸ್ತಿತ್ವದಲ್ಲಿದ್ದ ರಾಜ್ಯ ಸರ್ಕಾರದ ಮಾನದಂಡಗಳೊಂದಿಗೆ ಹೊಂದಿಕೊಳ್ಳಬೇಕು ಎಂದು ನಿರ್ಧರಿಸಲಾಯಿತು. 1993ರ ಮೇ-ಜೂನ್ ವೇಳೆಗೆ, ಆರಂಭಿಕ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳ ಫಲಿತಾಂಶಗಳು ಪೂರ್ಣಾವಧಿ ವಿಧ್ಯುಕ್ತ ಪ್ರಾಥಮಿಕ ಶಾಲೆಯ ಹೊರಗೆ ಭಾಗಶಃ ಅವಧಿಯ ಅನೌಪಚಾರಿಕ ಶಿಕ್ಷಣ ಕೇಂದ್ರ (non-formal education-NFE (ಎನ್‌ಎಫ್‌ಇ)) ಗಳ ರೂಪದಲ್ಲಿರಬೇಕಾದಂತ ಪ್ರಾಥಮಿಕ ಶಿಕ್ಷಣ ಸೌಕರ್ಯಗಳ ಅಗತ್ಯದೆಡೆಗೆ ಬೊಟ್ಟುಮಾಡಿದವು. ಇದಕ್ಕೆ ಅನುಗುಣವಾಗಿ, ಅಂತಹ NFE ಗಳನ್ನು ತೆರೆಯಲು ಸಹ ಮಾನದಂಡಗಳನ್ನು ರೂಪಿಸಲಾಯಿತು.

ಅದೇ ಸಮಯದಲ್ಲಿ ಆದ ಮತ್ತೊಂದು ಬೆಳವಣಿಗೆಯೆಂದರೆ, ವಿಕೇಂದ್ರೀಕೃತ ಆಯೋಜನೆಯ ಸಾಧನತ್ವಗಳ ವಿಕಾಸವಾಗಿತ್ತು. ಬ್ಲಾಕ್ ಕಾರ್ಯಸಂಚಾಲಕ ಗುಂಪುಗಳು (Block Steering Group – BSG (ಬಿಎಸ್‌ಜಿ) ಮೊದಲ ಸಮೂಹದ ಐದು ಬ್ಲಾಕ್‌ಗಳಲ್ಲಿ ಹಾಗೂ ಎರಡನೇ ಸಮೂಹದ ಹತ್ತು ಬ್ಲಾಕ್ ಗಳಲ್ಲೂ ಕಾರ್ಯಾಚರಣೆಯಲ್ಲಿ ಇದ್ದವು. ಎರಡನೇ ಸಮೂಹದ ಬ್ಲಾಕ್‌ಗಳು ಮಾರ್ಚ್ 1993ರಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. 1993ರ ಆದಿಭಾಗದಲ್ಲಿ, ಮರುಪರಿಶೀಲನೆ ಹಾಗೂ ಯೋಜನಾ ಸಭೆಗಳ ಅವಧಿಯಲ್ಲೇ, ಶೈಕ್ಷಣಿಕ ಆಡಳಿತಕ್ಕಾಗಿ ಬ್ಲಾಕ್‌ಸ್ತರದ ಸಮಿತಿ (Block-Level Committee for Educational Administration) (KSPS) (ಕೆಎಸ್‌ಪಿಎಸ್)) ಯ ಪರಿಕಲ್ಪನೆಯನ್ನು ರೂಪಿಸಲಾಯಿತು. ಶೈಕ್ಷಣಿಕ ಆಡಳಿತಕ್ಕೆ ಬ್ಲಾಕ್‌ಸ್ತರದ ಸಮಿತಿಯ ಸಂರಚನೆ, ಕಾರ್ಯಗಳು, ಅಧಿಕಾರ ಹಾಗೂ ಪ್ರಾಧಿಕಾರಗಳನ್ನು 1993ರ ಅಕ್ಟೋಬರ್ ತಿಂಗಳಲ್ಲಿ ರೂಪಿಸಲಾಯಿತು, ಮತ್ತು ರಾಜ್ಯ ಸರ್ಕಾರವು ಶಾಲೆಗಳನ್ನು ತೆರೆಯಲು, ಅವುಗಳನ್ನು ಉನ್ನತೀಕರಿಸಲು, ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಲು ಹಾಗೂ NFE ಗಳನ್ನು ತೆರೆಯಲು ಅನುಮತಿ ನೀಡಲು KSPS ಗೆ ಅಧಿಕಾರಗಳನ್ನು ವಹಿಸಿಕೊಡುವ ಆಜ್ಞೆಯನ್ನು ಹೊರಡಿಸಿತು.

1993ರ ನವೆಂಬರ್ ತಿಂಗಳಲ್ಲಿ ಅದುವರಿಗೂ ಸಾಧಿಸಲಾದ ಪ್ರಗತಿಯನ್ನು ಮರುಪರಿಶೀಲಿಸಲು ಹಾಗೂ ವಿಸ್ತೃತವಾಗುತ್ತಿದ್ದ ಶಾಲಾ ನಕ್ಷೆ ತಯಾರಿಸುವಿಕೆಯ ಕೆಲಸಕ್ಕೆ ನಿರ್ದಿಷ್ಟ ನಿಯತಾಂಕಗಳನ್ನು ರೂಪಿಸಲು ಎರಡು ದಿನಗಳ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯತಃ ಈ ಕಾರ್ಯಾಗಾರದಲ್ಲಿ ಎಲ್ಲಾ ಬ್ಲಾಕ್‌ಹಾಗೂ ಕ್ಲಸ್ಟರ್ ಮಟ್ಟದ ಸಿಬ್ಬಂದಿ ಹಾಜರಿದ್ದರು. ಅಲ್ಲದೆ, ಲೋಕ್ ಜುಂಬಿಶ್‌ನ ಕೇಂದ್ರಕಾರ್ಯಾಲಯದ ವ್ಯಕ್ತಿಗಳು, ಸಂಶೋಧನಾ ಬೆಂಬಲ ನೀಡುತ್ತಿದ್ದ ಸಹೋದ್ಯೋಗಿಗಳು, ಸಕ್ರಿಯಕರಣ ಸಂಸ್ಥೆಗಳಾಗಿ ತೊಡಗಿಸಿಕೊಂಡಂತಹ ಸರ್ಕಾರೇತರ ಸಂಸ್ಥೆಗಳು ಹಾಗೂ ರಾಷ್ಟ್ರೀಯ ಶೈಕ್ಷಣಿಕ ಆಯೋಜನೆ ಹಾಗೂ

ಆಡಳಿತ ಸಂಸ್ಥೆ (NIEPA) ಯ ಸಂಪನ್ಮೂಲ ವ್ಯಕ್ತಿಯೂ ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಈ ಕಾರ್ಯಾಗಾರಕ್ಕೂ ಮುಂಚಿನ ತಿಂಗಳುಗಳಲ್ಲಿ ಲೋಕ್ ಜುಂಬಿಶ್ ಕೇಂದ್ರಕಾರ್ಯಾಲಯದ ಸಿಬ್ಬಂದಿ ಹಾಗೂ ಇತರ ವ್ಯಕ್ತಿಗಳಿಂದ ನಡೆದ ಕ್ಷೇತ್ರ ಭೇಟಿಗಳು ಬಲಗಳನ್ನಷ್ಟೇ ಅಲ್ಲದೆ, ವಿವಿಧ ಪ್ರಕ್ರಿಯೆಗಳನ್ನು ಕಾರ್ಯಗತಗೊಳಿಸುವಲ್ಲಿ ಎದುರಿಸಿದ ಸಮಸ್ಯೆಗಳನ್ನು ಗುರುತಿಸಲು ಸಹ ಸಹಾಯಕವಾಗಿತ್ತು. ಈ ವೀಕ್ಷಣೆಗಳನ್ನು ಕಾರ್ಯಾಗಾರದಲ್ಲಿ ಭಾಗವಹಿಸಿದವರ ಎದುರು ಪ್ರಸ್ತುತಪಡಿಸಲಾಯಿತು ಮತ್ತು ಲೋಕ್ ಜುಂಬಿಶ್ ನ ಮೂಲತತ್ತ್ವ ಮತ್ತು ಕಾರ್ಯತಂತ್ರಗಳ ಹಿನ್ನೆಲೆಯಲ್ಲಿ ಅವರದ್ದೇ ಆದ ಅನುಭವಗಳ ಆಧಾರದ ಮೇಲೆ ಈ ಕಾರ್ಯವಿಧಾನಗಳನ್ನು ಅತಿನಿಷ್ಕೃಷ್ಟತೆಯಿಂದ ಮರುಪರಿಶೀಲನೆ ಮಾಡಲು ಕ್ಷೇತ್ರ ಸಿಬ್ಬಂದಿಯನ್ನು ಪ್ರೋತ್ಸಾಹಿಸಲಾಯಿತು. ಈ ಚರ್ಚೆಗಳು ಶಾಲಾ ನಕ್ಷೆ ತಯಾರಿಸುವಿಕೆಯ ಅಂತಿಮ ಸ್ವರೂಪವನ್ನು ಸಿದ್ಧಪಡಿಸಲು ವೇದಿಕೆಯನ್ನು ಸಜ್ಜುಗೊಳಿಸುವಲ್ಲಿ ನಿರ್ಣಾಯಕವಾಗಿದ್ದವು. ಈ ಕೆಳಗಿನ ಪ್ರಶ್ನೆಗಳು ಕಾರ್ಯಾಗಾರದಲ್ಲಿ ನಡೆದ ಮರುಪರಿಶೀಲನೆ ಹಾಗೂ ವಿಶ್ಲೇಷಣೆಯ ಸ್ವರೂಪವನ್ನು ವಿಶದೀಕರಿಸುತ್ತವೆ:

a. ಲಿಂಗ ಸಮಾನತೆಯನ್ನು ಸಾಧಿಸುವುದು ಲೋಕ್ ಜುಂಬಿಶ್‌ನ ಮೂಲ ಕಾರ್ಯತಂತ್ರಗಳಲ್ಲಿ ಒಂದಾಗಿರುವುದರಿಂದ, ನಾವು ಮುಖ್ಯ ತಂಡಗಳಲ್ಲಿ ಮಹಿಳೆಯರು ಇರುವಂತೆ ನೋಡಿಕೊಳ್ಳುವಲ್ಲಿ, ಕುಟುಂಬ ಸಮೀಕ್ಷೆಯನ್ನು ಕೈಗೊಳ್ಳುವಾಗ ಕುಟುಂಬದಲ್ಲಿನ ಮಹಿಳೆಯರನ್ನು ಸಂಪರ್ಕಿಸುವ ಅಗತ್ಯದ ಬಗ್ಗೆ ಪ್ರಜ್ಞಾವಂತರಾಗಿದ್ದೇವೆಯೇ, ಮತ್ತು ಕುಟುಂಬ ಸಮೀಕ್ಷೆಯ ಸಮಯದಲ್ಲಿ ಕುಟುಂಬದ ಪ್ರತಿ ಹೆಣ್ಣುಮಗುವನ್ನೂ ಸೇರಿಸಿಕೊಳ್ಳಲು ವಿಶೇಷ ಗಮನ ನೀಡುತ್ತೇವೆಯೇ?

b. ಸಮಾನತೆಗೆ ತೋರುವ ಕಾಳಜಿಯ ಒಂದು ಮುಖ್ಯ ಆಯಾಮವೇನೆಂದರೆ, ಅತಿ ಬಡತನದಲ್ಲಿರುವ ಹಾಗೂ ಅಂಚಿಗೆ ತಳ್ಳಲ್ಪಟ್ಟ ಕುಟುಂಬಗಳು, ಅದರಲ್ಲೂ ವಿಶೇಷವಾಗಿ ಗ್ರಾಮದ ಅಂಚಿನಲ್ಲಿ ವಾಸಿಸುತ್ತಿರುವ ಕುಟುಂಬಗಳು ಅಥವಾ ಗುಳೆಹೋಗುವ ಕುಟುಂಬಗಳು, ಸಮೀಕ್ಷೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು ಎಂಬುದು. ನಾವು ಈ ಆವಶ್ಯಕತೆಗೆ ಸಾಕಷ್ಟು ಗಮನ ಹರಿಸುತ್ತಿದ್ದೇವೆಯೇ?

c. ಸಮುದಾಯವು ತೊಡಗಿಸಿಕೊಳ್ಳುವಂತೆ ಮಾಡುವುದು ಲೋಕ್ ಜುಂಬಿಶ್‌ನ ಒಂದು ನಿರ್ಣಾಯಕ ಕಾರ್ಯತಂತ್ರವಾಗಿರುವುದರಿಂದ, ಮುಖ್ಯ ತಂಡಗಳ ನಿಜವಾದ ಪಾತ್ರದ ಕುರಿತು ಪ್ರಶ್ನೆಗಳನ್ನು ಎತ್ತಲಾಯಿತು. ಸಮೀಕ್ಷೆಯ ತೀರ್ಮಾನಗಳನ್ನು ವಿಶಾಲ ಸಮುದಾಯದೊಂದಿಗೆ ಹಂಚಿಕೊಳ್ಳಲಾಗುತ್ತಿದೆಯೇ, ಅಥವಾ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಮುಖ್ಯವಾಗಿ ಲೋಕ್ ಜುಂಬಿಶ್ ನ ಸಿಬ್ಬಂದಿ ಅರ್ಥಮಾಡಿಕೊಳ್ಳಬೇಕಾದ ಹಾಗೂ ಬಳಸಬೇಕಾದ ತಂತ್ರವನ್ನಾಗಿ ಮಾತ್ರ ನಾವು ನೋಡುತ್ತಿದ್ದೇವೆಯೇ?

d. ಲೋಕ್ ಜುಂಬಿಶ್ ನ ಕೆಲಸದ ಮತ್ತೊಂದು ಗುಣಲಕ್ಷಣವು ಗುಣಮಟ್ಟದ ಮೇಲೆ ಗಮನ ಕೇಂದ್ರೀಕರಿಸುವುದಾಗಿರುವುದರಿಂದ, ಶಾಲಾ ನಕ್ಷೆ ತಯಾರಿಸುವಿಕೆಯ ಕೆಲಸವು ಪ್ರಗತಿಹೊಂದುತ್ತಿದ್ದ ರೀತಿಯು ತೃಪ್ತಿದಾಯಕ ಗುಣಮಟ್ಟದ್ದು ಎಂದು ಪರಿಗಣಿಸಬಹುದೇ ಎಂದು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದವರು ತಮಗೆ ತಾವೇ ಕೇಳಿಕೊಂಡರು.

ಈ ಪ್ರಶ್ನೆಗಳಲ್ಲಿ ಬಹಳಷ್ಟಕ್ಕೆ ಹಾಗೂ ಇದೇ ರೀತಿಯ ಇತರ ಪ್ರಶ್ನೆಗಳಿಗೆ ಮಿಶ್ರ ಪ್ರತಿಕ್ರಿಯೆಗಳು ಇದ್ದವು ಮತ್ತು ಅವುಗಳಲ್ಲಿ ಹಲವಕ್ಕೆ ಹೆಚ್ಚಿನ ಗಮನ ನೀಡುವ ಅಗತ್ಯವಿದೆ ಎಂಬುದು ಸ್ಪಷ್ಟವಾಯಿತು. ಅದುವರೆಗೂ ಬಳಕೆಯಲ್ಲಿದ್ದ 'ಸ್ಥೂಲ ಹಾಗೂ ಸಿದ್ಧ' ರೂಪದ ಶಾಲಾ ನಕ್ಷೆ ತಯಾರಿಸುವಿಕೆಯ ಕೈಪಿಡಿಯನ್ನು

ಮರುಪರಿಶೀಲಿಸಲಾಯಿತು, ಹಾಗೂ ಅಲ್ಲಿಯವರೆಗೂ ನಡೆಸಲಾದ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳ ಮೇಲೆ ಮತ್ತೊಮ್ಮೆ ಹೊಸದಾಗಿ ದೃಷ್ಟಿಹರಿಸುವ ಅಗತ್ಯವಿದೆ ಎಂದು ಅನಿಸಿತು. ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳನ್ನು ನಡೆಸುವಲ್ಲಿ ಒಳಗೊಂಡಿದ್ದ ಎಲ್ಲರಿಗೂ ಅಂತರಕ್ರಿಯಾತ್ಮಕ ತರಬೇತಿಯನ್ನು ಆಯೋಜಿಸಬೇಕೆಂಬ ಸಲಹೆಯೂ ಸಹ ಕೇಳಿಬಂತು. ಮುಖ್ಯ ತಂಡವನ್ನು ಬಲಗೊಳಿಸಲು ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒಂದು ಮಹಿಳಾ ವಶೀಲಿಗಾರ್ತಿಯರ ಗುಂಪನ್ನು ರಚಿಸಲು ಎಲ್ಲಾ ಗ್ರಾಮಗಳಲ್ಲೂ ಮಹಿಳಾ ಗುಂಪುಗಳನ್ನು ಸ್ಥಾಪಿಸಬೇಕೆಂಬುದು ಸ್ಪಷ್ಟವಾಯಿತು.

**ಕ್ಷೇತ್ರಾನುಭವದ ವಿಶ್ಲೇಷಣೆ ಹಾಗೂ ಕೈಪಿಡಿಯ ಪುನರ್ರಚನೆ**

ತದನಂತರದ ಆರೇಳು ತಿಂಗಳುಗಳ ಪ್ರಕ್ರಿಯೆಯು ಗ್ರಾಮಕ್ಕೆ ಸಂಬಂಧಿಸಿದಂತೆ ಹಿಂದಿನ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಯತ್ನಗಳನ್ನು ಅತಿನಿಷ್ಕೃಷ್ಟತೆಯಿಂದ ಮರುಪರಿಶೀಲನೆ ಮಾಡುವುದನ್ನು ಒಳಗೊಂಡಿತ್ತು. ಆರಂಭಿಕ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಅರ್ಧಕ್ಕಿಂತಲೂ ಹೆಚ್ಚು ಗ್ರಾಮಗಳಲ್ಲಿ ಮತ್ತೊಮ್ಮೆ ಮಾಡಬೇಕಾದ ಅಗತ್ಯ ಕಂಡುಬಂತು. ಅದೃಷ್ಟವಶಾತ್, ಅದುವರೆಗೂ ಶಾಲಾ ನಕ್ಷೆ ತಯಾರಿಸುವಿಕೆಯನ್ನು ಕೈಗೊಳ್ಳಲಾಗಿದ್ದ ಗ್ರಾಮಗಳ ಒಟ್ಟು ಸಂಖ್ಯೆ ಕೇವಲ 450ರ ಆಸುಪಾಸಿನಲ್ಲಿದ್ದು, ಇದರಲ್ಲಿ 250-290 ಗ್ರಾಮಗಳಲ್ಲಿ ಪರಿಷ್ಕರಣೆಯ ಅಗತ್ಯತೆಯು ಕಂಡುಬಂತು.

1994ರ ಜುಲೈ ತಿಂಗಳಲ್ಲಿ ಮೌಂಟ್ ಅಬುವಿನಲ್ಲಿ ನಡೆದ ವಾರ್ಷಿಕ ಶಿಬಿರದಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯ ವಿಷಯವು ವಿಶೇಷ ಗಮನ ಪಡೆಯಿತು. ಲೋಕ್ ಜುಂಬಿಶ್ ನ ಕಾರ್ಯತಂತ್ರಗಳನ್ನು ನಿಷ್ಠೆಯಿಂದ ಪಾಲಿಸಿದಂತಹ ಪರಿಷ್ಕೃತ 'ಕೈಪಿಡಿ' ಯನ್ನು ಬಳಸಿದುದರಿಂದ ಗಳಿಸಿದ ಸಮೃದ್ಧ ಅನುಭವದೊಂದಿಗೆ 15 ಬ್ಲಾಕ್ ಗಳಿಂದ BSG ಯ ಸದಸ್ಯರು ಬಂದಿದ್ದರು. ಗಾಢ ಚರ್ಚೆಯ ಬಳಿಕ ಕೈಪಿಡಿಯನ್ನು ಸುಧಾರಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು. ನುರಿತ ತರಬೇತುಗಾರರಾಗಿ ಕ್ಷೇತ್ರಕಾರ್ಯಕರ್ತರ ತಂಡವೊಂದನ್ನು ರೂಪಿಸುವ ಹಾಗೂ ಅವರ ನೆರವಿನೊಂದಿಗೆ ತರಬೇತಿ ಕಾರ್ಯಾಗಾರಗಳ ಸರಣಿಯನ್ನು ಆಯೋಜಿಸುವ ನಿರ್ಧಾರವನ್ನು ಕೂಡ ಕೈಗೊಳ್ಳಲಾಯಿತು.

ಸಣ್ಣ ಗುಂಪುಗಳ ರಚನೆಯ ಮೂಲಕ ಸಂಬಂಧಪಟ್ಟ ಎಲ್ಲರ ವೈಯಕ್ತಿಕ ಅನುಭವಗಳನ್ನು ಹಾಗೂ ಗ್ರಹಿಕೆಗಳನ್ನು ಹೊರಸೆಳೆಯುವ ಕಾರ್ಯಕ್ಕೆ ಮತ್ತು ತರಬೇತಿ ಕೈಪಿಡಿಯ ಕರಡುಪ್ರತಿ ಸಿದ್ಧಗೊಳಿಸುವ ಕಾರ್ಯಕ್ಕೆ 1994ರ ಆಗಸ್ಟ್ ತಿಂಗಳನ್ನು ಮೀಸಲಿಡಲಾಗಿತ್ತು. ಇದನ್ನು ಅನುಸರಿಸಿ, ಮುಂಬರುವ ತಿಂಗಳುಗಳಲ್ಲಿ ಆಯೋಜಿಸಬೇಕಿದ್ದ ತರಬೇತಿ ಕಾರ್ಯಕ್ರಮಗಳ ಸರಣಿಗೆ ನುರಿತ ತರಬೇತುದಾರರಾಗಿ ಕ್ಷೇತ್ರಸ್ತರದ ವ್ಯಕ್ತಿಗಳನ್ನು ಸಜ್ಜುಗೊಳಿಸಲು ಅವರ ಜೊತೆಯಲ್ಲಿ ಕಾರ್ಯಾಗಾರವೊಂದನ್ನು ಹಮ್ಮಿಕೊಳ್ಳಲಾಯಿತು. ಇದಾದ ಬಳಿಕ, ತಡವಿಲ್ಲದೆ ಕೈಪಿಡಿಯ ಮರುಪರಿಶೀಲನೆ ಮಾಡಲು ಹಾಗೂ ಮುಂಬರಲಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಪ್ರಾಧಾನ್ಯ ನೀಡಬೇಕಿರುವ ವಿವಿಧ ಅಂಶಗಳನ್ನು ಅರ್ಥಮಾಡಿಕೊಳ್ಳಲು ಎರಡು ದಿನಗಳ ತೀವ್ರರೂಪದ ಕಾರ್ಯಾಗಾರವೊಂದನ್ನು 1994ರ ಆಗಸ್ಟ್ 31ರಿಂದ ಸೆಪ್ಟೆಂಬರ್ 1ರವರೆಗೆ ಆಯೋಜಿಸಲಾಯಿತು. ಈ ಕಾರ್ಯಾಗಾರದಲ್ಲಿ ಕಾರ್ಯತಃ ಎಲ್ಲಾ ಉದ್ದೇಶಗಳಿಗಾಗಿ

ಕೈಪಿಡಿಯು ಪುನರ್ರಚಿಸಲ್ಪಟ್ಟಿತು ಹಾಗೂ ಸವಾಲೊಡ್ಡುವ ನಾಲ್ಕು ದಿನಗಳ ತರಬೇತಿ ಕಲಾಪವನ್ನು ಆಯೋಜಿಸುವ ಕಾರ್ಯವನ್ನು ಕೈಗೊಳ್ಳಲು ಭಾಗವಹಿಸಿದವರು ಅವರು ಸಿದ್ಧರಾಗಿದ್ದರೆಂದು ಭಾವಿಸಿದರು. ಅದರಲ್ಲಿ ಪಾಲ್ಗೊಂಡಿದ್ದ ಬಹುತೇಕ ಎಲ್ಲಾ ನುರಿತ ತರಬೇತುದಾರರು ಕ್ಲಸ್ಟರ್ ಸ್ತರದ ಸಿಬ್ಬಂದಿಯಾಗಿದ್ದರೆ, ತರಬೇತು ಶಿಕ್ಷಾರ್ಥಿಗಳು BSGಯ ಸಿಬ್ಬಂದಿ ಹಾಗೂ ಕೇಂದ್ರಕಾರ್ಯಾಲಯದ ಸಿಬ್ಬಂದಿಯಾಗಿದ್ದ ಸಂಗತಿ ಈ ಸವಾಲನ್ನು ಇನ್ನಷ್ಟು ಕಷ್ಟಕರವಾಗಿಸಿತು.

**ಶಾಲಾ ನಕ್ಷೆ ತಯಾರಿಸುವಿಕೆಯ ಸ್ಥೂಲ ರೂಪುರೇಖೆಗಳ ಹೊರಹೊಮ್ಮಿಕೆ**

1994ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಮೂರು ಗುಂಪುಗಳಲ್ಲಿ, ಪ್ರತಿ ಗುಂಪಿಗೂ ಐದು ತರಬೇತಿ ಕಲಾಪಗಳಿರುವಂತೆ, ಒಟ್ಟು 15 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು. ಲೋಕ್ ಜುಂಬಿಶ್ ನ ತರಬೇತಿ ಹಾಗೂ ಸಂಶೋಧನೆಯ ಬೆನ್ನೆಲುಬಾಗಿ ನಿಂತಿರುವ ಸಂಧನ್ ಶೋಧ್ ಕೇಂದ್ರ (Sandhan Shodh Kendra)ದ ಸದಸ್ಯರು ಎಲ್ಲಾ ತರಬೇತಿ ಕಲಾಪಗಳಲ್ಲೂ ಹಾಜರಿದ್ದರು. ತರಬೇತಿದಾರರ ತಂಡ ಹಾಗೂ ತರಬೇತು ಶಿಕ್ಷಾರ್ಥಿಗಳನ್ನೂ ಸಹ ತಮ್ಮ ವೀಕ್ಷಣೆಗಳನ್ನು, ಅದರಲ್ಲೂ ವಿಶೇಷವಾಗಿ ಶಾಲಾ ನಕ್ಷೆ ತಯಾರಿಸುವಿಕೆಯ ಪ್ರಕ್ರಿಯೆಯಲ್ಲಿ ಅಗತ್ಯವಿರುವ ಸುಧಾರಣೆಗಳಿಗೆ ಸಂಬಂಧಿಸಿದಂತೆ, ದಾಖಲಿಸುವಂತೆ ಹಾಗೂ ಕೈಪಿಡಿಯ ವಿಷಯಗಳನ್ನು ಹೇಗೆ ಇನ್ನೂ ಪ್ರಯೋಜನಕಾರಿಯಾಗಿಸಬಹುದು ಎಂಬುದನ್ನು ಕೂಡ ಸೂಚಿಸುವಂತೆ ಕೇಳಲಾಯಿತು. ಕಾರ್ಯತಃ ಲೋಕ್ ಜುಂಬಿಶ್ ನ ಎಲ್ಲಾ ಸದಸ್ಯರೂ ಈ ತರಬೇತಿ ಕಾರ್ಯಕ್ರಮಗಳ ಪೈಕಿ ಕನಿಷ್ಠ ಒಂದರಲ್ಲಾದರೂ ಪಾಲ್ಗೊಳ್ಳುವುದನ್ನು ಖಾತ್ರಿಪಡಿಸಲಾಗಿತ್ತು. ಕಲಾಪದ ಈ ಪ್ರಯತ್ನದೊಂದಿಗೆ, ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿಯ ವಿಶ್ಲೇಷಣೆಗೆ, ಪರಿಣಾಮಕಾರಿಯ ಸಮುದಾಯ ಒಳಗೊಳ್ಳುವಿಕೆಗೆ, ಮತ್ತು ಲೋಕ್ ಜುಂಬಿಶ್ ನ ಇತರ ಚಟುವಟಿಕೆಗಳನ್ನು ರೂಪಿಸಲು ಚೌಕಟ್ಟನ್ನು ಒದಗಿಸುವುದಕ್ಕೆ ಲೋಕ್ ಜುಂಬಿಶ್‌ನ ಅಡಿಯಲ್ಲಿ ಶಾಲಾ ನಕ್ಷೆ ತಯಾರಿಸುವಿಕೆಯು ಒಂದು ಸುನಿರೂಪಿತ ಕಾರ್ಯತಂತ್ರವಾಗಿ ಹೊರಹೊಮ್ಮಿದೆ ಎಂದು ಹೇಳಬಹುದಾಗಿದೆ.

ಈ ಸಮಯದ ಆಸುಪಾಸಲ್ಲಿ ಲೋಕ್ ಜುಂಬಿಶ್ ನ ಹಲವು ಇತರ ಚಟುವಟಿಕೆಗಳು ಕೂಡ ವಿಕಾಸಗೊಂಡವು. ಶಾಲಾ ನಕ್ಷೆ ತಯಾರಿಸುವಿಕೆಯ ಮೇಲಿರುವ ಗಮನವನ್ನು ಪ್ರವೇಶೋತ್ಸವ (ಪಾಲ್ಗೊಳ್ಳುವವರನ್ನು ಸ್ವಾಗತಿಸುವ ಸಮಾರಂಭ), ಗ್ರಾಮ ಶಿಕ್ಷಣ ದಾಖಲೆ ಪುಸ್ತಕ (Village Education Register – VER (ವಿಇಆರ್))ದ ವ್ಯವಸ್ಥಿತ ಪಾಲನೆ, ಗ್ರಾಮ ಶಿಕ್ಷಣ ಯೋಜನೆಗಳ ತಯಾರಿ ಹಾಗೂ ನಾಪಾಸು ದಾಖಲೆ ಪುಸ್ತಕಗಳೂ ಸೇರಿದಂತೆ ಸೂಕ್ಷ್ಮ-ಆಯೋಜನೆಗಳ (micro-planning – MP (ಎಮ್‌ಪಿ)) ಕಡೆಗೆ ತಿರುಗಿಸುವ ಅಗತ್ಯವಿದೆ ಎಂಬುದು ಕಂಡುಬಂದಿತು. ಶಾಲಾ ನಕ್ಷೆ ತಯಾರಿಸುವಿಕೆಯ ಕಾರ್ಯವನ್ನು ಸರಿಯಾಗಿ ಮಾಡಲಾಗಿದ್ದ ಹಾಗೂ ಶಕ್ತಿಯುತ ಮುಖ್ಯ ತಂಡಗಳು ಹಾಗೂ ಮಹಿಳಾ ಗುಂಪುಗಳನ್ನು ರಚಿಸಲಾಗಿದ್ದ ಗ್ರಾಮಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ (Village Education Committee-VEC (ವಿಇಸಿ))ಗಳ ಸ್ಥಾಪನೆಗೆ ಕಾಲ ಸನ್ನಿಹಿತವಾಗಿದೆ ಎಂದೂ ಅಭಿಪ್ರಾಯಪಡಲಾಯಿತು. 1995ರಲ್ಲಿ ಆಯೋಜಿಸಲಾದ ಐದಾರು ತರಬೇತಿ ಕಾರ್ಯಕ್ರಮಗಳಲ್ಲಿ ಈ ವಿಸ್ತೃತ ದೃಷ್ಟಿಕೋನವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಲಾಗಿತ್ತು ಹಾಗೂ ಶಾಲಾ ನಕ್ಷೆ ತಯಾರಿಸುವಿಕೆ ಮತ್ತು ಸೂಕ್ಷ್ಮ-ಆಯೋಜನೆಗಳೆರಡಕ್ಕೂ ಒತ್ತು

ನೀಡಲಾಯಿತು. ಪ್ರಸ್ತುತ ಚಾಲ್ತಿಯಲ್ಲಿರುವ ಕೈಪಿಡಿಯ ಆವೃತ್ತಿಯನ್ನು ಹೊರತರುವ ಪ್ರಕ್ರಿಯೆಯಲ್ಲಿ ಈ ಅನುಭವಗಳಿಂದ ದೊರೆತ ಪ್ರತಿಕ್ರಿಯೆಗಳನ್ನು ಸೇರಿಸಲಾಯಿತು.

**ಅನುವಾದ: ಕುಶಲ್**

ಅನುವಾದಕರ ಟಿಪ್ಪಣಿಗಳು:

1. ಅಭಿವೃದ್ಧಿಯ ಕಾರ್ಯಯೋಜನೆಗಳು ಹಾಗೂ ಕಾರ್ಯಕ್ರಮಗಳ ಆಯೋಜನೆ ಮತ್ತು ನಿರ್ವಹಣೆಗಳ ವಿಚಾರದಲ್ಲಿ ಗ್ರಾಮೀಣ ಜನರ ಜ್ಞಾನ ಮತ್ತು ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳುವ ಗುರಿ ಈ ವಿಧಾನದ್ದಾಗಿದೆ.
2. ರಾಜ್ಯಗಳ ಬುಡಕಟ್ಟು ಜನಾಂಗದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಹರಿದು ಬರುವ ನೆರವನ್ನು ಸರಿಯಾಗಿ ನಿರ್ದೇಶಿಸಲು ಭಾರತದಲ್ಲಿ ಬಳಸಲಾಗುವ ಆಯೋಜನಾ ಪರಿಕಲ್ಪನೆಯಿದು.
3. 1987ರಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಆರಂಭಿಸಲಾದ ಈ ಕಾರ್ಯಕ್ರಮವು ದೇಶದ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಬೇಕಿರುವ ಕನಿಷ್ಠ ಆವಶ್ಯಕ ಸೇವೆಗಳನ್ನು ಒದಗಿಸುವ ಆಶಯ ಹೊತ್ತಿತ್ತು.

***

## Glossary

Composite - ಸಂಯೋಜಿತ

Intervention - ಹಸ್ತಕ್ಷೇಪ

Autonomous - ಸ್ವಾಧಿಕಾರಪೂರ್ಣ

Universalization - ಸಾರ್ವತ್ರಿಕೀಕರಣ

Functionary - ಕಾರ್ಯನಿರ್ವಾಹಕ

Empowerment - ಸಬಲೀಕರಣ

Micro-planning - ಸೂಕ್ಷ್ಮ-ಆಯೋಜನೆ

Contour - ರೂಪರೇಖೆ

Matrix - ಮಾತೃಕೆ

Parameter - ನಿಯತಾಂಕ

Connotation - ಸೂಚಿತಾರ್ಥ

Assessment - ನಿರ್ಧಾರಣೆ, ಮೌಲ್ಯನಿರ್ಣಯ, ಮೌಲ್ಯಮಾಪನ

Norm based - ಮಾನದಂಡಾಧಾರಿತ

Fieldworker - ಕ್ಷೇತ್ರಕಾರ್ಯಕರ್ತ

Diagnosis - ವಿಶ್ಲೇಷಣೆ

Action plan - ಕಾರ್ಯ ಯೋಜನೆ

Visual - ದೃಶ್ಯಾತ್ಮಕ

Sustainable - ಸುಸ್ಥಿರ

Database - ದತ್ತಸಂಚಯ

Empiric - ಪ್ರಾಯೋಗಿಕ

Input - ದತ್ತಮಾಹಿತಿ/ ಸಂಭಾರ

Macro-Planning - ಸ್ಥೂಲ-ಆಯೋಜನೆ

Beneficiary Group - ಫಲಾನುಭವಿ ಗುಂಪು

Mass Education - ಸಾಮೂಹಿಕ ಶಿಕ್ಷಣ

Block - ಬ್ಲಾಕ್

Instrumentality - ಸಾಧನತ್ವ

Upgrade - ಉನ್ನತೀಕರಿಸು, ಸುಧಾರಿಸು

Headquarters - ಕೇಂದ್ರಕಾರ್ಯಾಲಯ

NGO - ಸರ್ಕಾರೇತರ ಸಂಸ್ಥೆ

Gender Equality - ಲಿಂಗ ಸಮಾನತೆ

Lobby - ವಶೀಲಿಗಾರರ ಗುಂಪು

Interactive - ಅಂತರಕ್ರಿಯಾತ್ಮಕ